(ಗೊಂದಲ)

ಅಧ್ಯಕ್ಷರು : ಇವತ್ತು ಮೂರ್ನಾಲ್ಕು ಗಂಟೆಗಳ ಕಾಲ ಶೂನ್ಯ ವೇಳೆಗೆ ತೆಗೆದುಕೊಂಡಿದ್ದೀರಿ. ಸರ್ಕಾರಿ ಕೆಲಸವನ್ನು ಮಾಡುವುದು ಬೇಡವೇ? 6 ಗಂಟೆಗಳ ಅವಧಿಯಲ್ಲಿ ಸರ್ಕಾರದ ಕೆಲಸಗಳು ಏನು ಆಗಿಲ್ಲ. ಆದುದರಿಂದ ಮಾನ್ಯ ಜಗದೀಶ್ ಶೆಟ್ಟರ್‌ರವರೇ, ತಾವು ನಿನ್ನೆ ದಿವಸ ನೀರಾವರಿ ಮತ್ತು ಕೆಲವು ಕಾನೂನು (ತಿದ್ದುಪಡಿ) ವಿಧೇಯಕದ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ ಅದನ್ನು ಕಂಟಿನ್ಯೂ ಮಾಡಿ, ಇನ್ನು ಉಳಿದಂತಹ ವಿಷಯಗಳನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಅಧ್ಯಕ್ಷರೆ, ಆಸ್ಪತ್ರೆಯಲ್ಲಿ ಸತ್ತವರ ಕುಟುಂಬಕ್ಕೆ ಪರಿಹಾರವನ್ನು ಸರ್ಕಾರ ಕೊಡಲಿ, ಅವರು ತೀರಾ ಬಡವರಾಗಿದ್ದಾರೆ, ಅವರಿಗೆ ಏನು ಗತಿ ಇಲ್ಲ.

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್, ತಮ್ಮ ಚರ್ಚೆಯನ್ನು ಮುಂದುವರೆಸಿ, ಇನ್ನು ಉಳಿದಂತಹ ವಿಷಯಗಳನ್ನು ನಾಳೆ ತೆಗೆದುಕೊಳ್ಳೋಣ, ಇವತ್ತು ಬೇಡ. ಇವತ್ತು ಬೆಳಿಗ್ಗೆ 11.00 ಗಂಟೆಗೆ ಸಭೆ ಆರಂಭವಾಗಿದ್ದು 6 ಗಂಟೆಯೊಳಗೆ ಸರ್ಕಾರಿ ಕೆಲಸ ಅರ್ಧ ಗಂಟೆಯಾದರೂ ಮಾಡುವುದು ಬೇಡವೇ? ನೀವೇ ಹೇಳಿ, ಅವರು ಸರ್ಕಾರಿ ಕೆಲಸ ನಡೆಯುತ್ತಿದೆಯೋ ಅಥವಾ ಇಲ್ಲವೋ ಎಂದು ಕೇಳುತ್ತಾರೆ. ಈಗ ಶೂನ್ಯ ವೇಳೆಯಲ್ಲಿ ಚರ್ಚಿಸಬೇಕಾಗಿರುವ ಉಳಿದಂತಹ ವಿಷಯಗಳನ್ನು ನಾಳೆ ತೆಗೆದುಕೊಳ್ಳುತ್ತೇನೆ. ತಾವು ಈಗ ಚರ್ಚೆಯನ್ನು ಮುಂದುವರೆಸಿ.

ಶ್ರೀ ಜಗದೀಶ್ ಶೆಟ್ಟರ್ : ಶ್ರೀ ಅಪ್ಪಚ್ಚುರಂಜನ್‌ರವರಿಗೆ, ನಾಳೆ ಅವಕಾಶವನ್ನು ಕೊಡಿ .....

(ಗೊಂದಲ)

## ಶಾಸನ ರಚನೆ

## ಪರ್ಯಾಲೋಚನ ಪ್ರಸ್ತಾಪ

## ಕರ್ನಾಟಕ ನೀರಾವರಿ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ, 2000

### ಮುಂದುವರೆದ ಚರ್ಚೆ

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮೊನ್ನೆ ದಿವಸ ಈ ಬಿಲ್ ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ಆಗ ಕೆಲವು ಡೌಟ್‌ಗಳನ್ನು ನಾನು ಪ್ರಸ್ತಾಪ ಮಾಡಿದ್ದೆ, ಅದೇನೆಂದರೆ "ನೀರಾವರಿ ಬಳಕೆದಾರರ ಸಂಘ" ಇದು ರೈತರಿಗೆ ಅನುಕೂಲವಾಗಬೇಕು. ಇದು ರಾಜಕೀಯ ಹಿತಾಸಕ್ತಿಯನ್ನು ಕಾಪಾಡುವ ಸಲುವಾಗಿ ಉಪಯೋಗವಾಗಬಾರದು. ಇದು ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲೂ ಆಗುತ್ತದೆಂದು ಹೇಳುತ್ತಿಲ್ಲ. ಕೆಲವೊಂದು ಭಾಗಗಳಲ್ಲಿ, ಕೆಲವೊಂದು ಜಿಲ್ಲೆಗಳಲ್ಲಿ ಆಗುವಂತಹ ಸಾಧ್ಯತೆಗಳು ಇವೆ. ಆದುದರಿಂದ ಈ ಸಹಕಾರ ಸಂಘಗಳನ್ನು ರಾಜಕೀಯ ಅಸ್ತ್ರವನ್ನಾಗಿ ಬಳಸಿಕೊಳ್ಳುವಂಥಾದ್ದು ಆದರೆ ಇದರ ಮೂಲಭೂತ ಉದ್ದೇಶ ಏನು ಇದೆ, ಅದು ನೀರಾವರಿ ಇಲಾಖೆಯ ಅಧಿಕಾರಿಗಳಿರಬಹುದು, ಇಂಜಿನಿಯರುಗಳು

ಇರಬಹುದು, ಇವರಿಂದ ರೈತರರ ಶೋಷಣೆಯಾಗುವಂಥಾದ್ದು ತಪ್ಪಿಸುವಂಥಾದ್ದಕ್ಕೆ ಈ ಬಿಲ್ ತಂದಿರುವಂಥಾ ನೀರಾವರಿ ಸಚಿವರಾದ ಮಾನ್ಯ ಹೆಚ್.ಕೆ. ಪಾಟೀಲ್ ರವರ ಆಸೆ ಏನು ಇದೆ. ಅದಕ್ಕೆ ಯಾವುದೇ ರೀತಿಯಾಗಿ ಧಕ್ಕೆಯಾಗಬಾರದು.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಈ ವಿಷಯವನ್ನು ನಾನು ಮೊನ್ನೆ ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ಬಹಳ ಮುಖ್ಯವಾಗಿ ರೈತರಿಗೆ ಅನುಕೂಲವಾಗುವ ಸಲುವಾಗಿ ಈ ವಿಧೇಯಕವನ್ನು ತಂದಿರುವಂಥಾದ್ದು. ಇದರಿಂದ ರೈತರಿಗೆ ಒಳ್ಳೆಯದಾಗಲಿ, ಅದರಲ್ಲೂ ಮುಖ್ಯವಾಗಿ ಡ್ರೈ ಲ್ಯಾಂಡ್ ಜಮೀನುಗಳ ರೈತರು ಯಾರಿದ್ದಾರೆ, ಅವರಿಗೆ ಮುಖ್ಯವಾಗಿ ಇದರಿಂದ ಪ್ರಯೋಜನವಾಗಬೇಕು ಎಂಬುದು ನನ್ನ ಆಶಯವಾಗಿದೆ. ಇವತ್ತು ನೀರಾವರಿ ಇಲಾಖೆಯಲ್ಲಿ ಕಾಲುವೆಗಳು, ಇವುಗಳ ನಿರ್ವಹಣೆ ಇರಬಹುದು, ಹೂಳು ತೆಗೆಯುವಂಥಾದ್ದು ಇರಬಹುದು, ರಿಪೇರಿ ಇರಬಹುದು. ಇವುಗಳ ತೋರಿಕೆಯ ಖರ್ಚು ಹಾಕಿ ವರ್ಷೇ ವರ್ಷ ಏನು ಹಣ ಬರುತ್ತದೆ. ಅದರಲ್ಲಿ ಶೇ. 10, 20ರಷ್ಟು ಖರ್ಚು ಮಾಡಿ ಬಹಳಷ್ಟು ಹಣವನ್ನು ಬೇರೆ ರೀತಿಯಲ್ಲಿ ಅವ್ಯವಹಾರ ಮಾಡುವಂಥಾದ್ದು ನೀರಾವರಿ ಇಲಾಖೆಯಲ್ಲಿ ನಡೆಯುತ್ತದೆ. ಈ ರೀತಿಯಾಗಿ ರೈತರ ಶೋಷಣೆ ನಡೆಯುತ್ತದೆ, ಇದು ತಪ್ಪಬೇಕು. ರೈತರು ಈ ನೀರಾವರಿ ವಿಷಯದಲ್ಲಿ ಇನ್‌ವಾಲ್ವ್ ಆಗಿರಬೇಕು, ಇದು ಈ ಬಿಲ್‌ನಿಂದ ಆಗಬಹುದೆಂದು ನಾನು ತಿಳಿದುಕೊಂಡಿದ್ದೇನೆ. ನಾನು ಮೊನ್ನೆ ಮಾತನಾಡುವಂತಹ ಸಂದರ್ಭದಲ್ಲಿ ಕೆಲವು ಕ್ಲಾರಿಫಿಕೇಶನ್ ಕೇಳಿದ್ದೇನೆ. ತಾವು ಪ್ರತಿ ವರ್ಷ ನೀರಾವರಿ ಇಲಾಖೆಗೆ ನಿರ್ವಹಣೆಗೆ ಎಂದು ಏನು ಅನುದಾನವನ್ನು ಕೊಡುತ್ತಿರೋ, ಅದನ್ನು ಈ ಸಹಕಾರ ಇಲಾಖೆಗಳಿಗೆ ಕೊಡುತ್ತಿರೂ ಎನ್ನುವಂಥಾದ್ದು ಅಥವಾ ರೈತರಿಂದ ಏನು ಶುಲ್ಕವನ್ನು ವಸೂಲು ಮಾಡುತ್ತೀರಿ, ಆ ಶುಲ್ಕದಿಂದ ಕೆಲಸವನ್ನು ಮಾಡಿಕೊಂಡು ಹೋಗಬೇಕೋ? ಇದರ ಬಗ್ಗೆ ನನಗೆ ಸ್ಪಷ್ಟೀಕರಣ ನೀಡಬೇಕು. ಇನ್ನು ನನ್ನ ಒಂದೆರಡು ಸಂಶಯಗಳು ಏನೆಂದರೆ ಈಗ 1200 ಎಕರೆಗಳಿಗೆ ತಾವು ಒಂದೆರಡು ಯೂನಿಟ್ ಎಂದು ಹೇಳಿದ್ದೀರಿ. ಕೆಲವು ಗ್ರಾಮಗಳಲ್ಲಿ 700 ಎಕರೆ ಇರಬಹುದು, 800 ಎಕರೆ, 900 ಎಕರೆಗಳಿರಬಹುದು. ಇದಕ್ಕೆ ಮಿನಿಮಮ್ ಫಿಕ್ಸ್ ಮಾಡುತ್ತಿರೂ, ಮ್ಯಾಕ್ಸಿಮಮ್ ರೇಟ್ ಫಿಕ್ಸ್ ಮಾಡುತ್ತೀರೋ? ಒಂದು ಯೂನಿಟ್ ಉಪಯೋಗ ಮಾಡುವಂಥಾದ್ದಕ್ಕೆ ಎಷ್ಟು, ಇದರ ಬಗ್ಗೆ ಕ್ಲಾರಿಫಿಕೇಶನ್ ಬೇಕಾಗಿದೆ. ಇನ್ನೊಂದು ಬಹಳ ಮುಖ್ಯವಾದಂತಹ ವಿಚಾರವೇನೆಂದರೆ ಒಂದು ಗ್ರಾಮದಲ್ಲಿ ಎರಡು ಸಂಘಗಳು ನಿಯೋಜನೆಯಾಗುತ್ತದೆ, ಈ ಎರಡು ಸಂಘಗಳು ಮೆಂಬರ್‌ಗಳನ್ನು ಮಾಡಿಕೊಳ್ಳುತ್ತಾರೆ. ಅಂತಹ ಸಂದರ್ಭದಲ್ಲಿ ಯಾವ ಸಂಘವನ್ನು ರೆಕಗ್ನೈಸ್ ಮಾಡುವುದು? ಆಗ ಇಲ್ಲಿ ಡಿಸ್‌ಪ್ಯೂಟ್ ಬರುತ್ತದೆ.

4.50 ಪಿ.ಎಂ.

ಹೀಗಾಗಿ ಒಂದು ಗ್ರಾಮದಲ್ಲಿ ಎರಡು ಸಂಘಗಳು ಮುಂದೆ ಬರುತ್ತವೆ. ಇವತ್ತು ನೀರಾವರಿ ಸಹಕಾರ ಸಂಘವನ್ನು ಸ್ಥಾಪನೆ ಮಾಡುತ್ತೇನೆಂದು ಒಬ್ಬರು ಮುಂದೆ ಬರುತ್ತಾರೆ, ಅವರು ಮುನ್ನೂರು ನಾನೂರು ರೈತರನ್ನು ಸದಸ್ಯರನ್ನಾಗಿ ಮಾಡಿಕೊಳ್ಳುತ್ತಾರೆ, ಅವರಲ್ಲಿ ಐನೂರು ಎಕರೆ ಜಮೀನು ಇರುತ್ತದೆ.

ಅದೇ ಗ್ರಾಮದ ಇನ್ನೊಬ್ಬರು ನಾನು ನೀರಾವರಿ ಸಹಕಾರ ಸಂಘವನ್ನು ಮಾಡುತ್ತೇನೆಂದು ಮುಂದೆ ಬರುತ್ತಾರೆ, ಆವಾಗ ಯಾವ ಸಂಘವನ್ನು ನೋಂದಣಿ ಮಾಡುತ್ತೀರಿ, ಅದಕ್ಕೆ ಅಳತೆಗೋಲು ಏನು? ಯಾವ ಸಂಘಕ್ಕೆ ಆದ್ಯತೆಯನ್ನು ಕೊಡುತ್ತೀರಿ, ಅದಕ್ಕೆ ಮಾರ್ಗಸೂಚಿ ಏನು? ಇದರ ಬಗ್ಗೆ ಸ್ಪಷ್ಟನೆಯಾಗಬೇಕು. ನಾನು ಈ ವಿಷಯವನ್ನು ಒಂದು ಉದಾಹರಣೆ ಸಹಿತ ಹೇಳುವುದಕ್ಕೆ ಹೇಳಬಯಸುತ್ತೇನೆ. ಮೊನ್ನೆ ಬಿಲ್ ಪಾಸ್ ಆಗಿದ್ದು ಪತ್ರಿಕೆಯಲ್ಲಿ ಬಂದು, ಸಾಕಷ್ಟು ಜನ ರೈತರು ನನ್ನನ್ನು ಸಂಪರ್ಕಿಸಿ, ಈ ಮಸೂದೆ ತಂದಿದ್ದು ತುಂಬಾ ಒಳ್ಳೆಯದು, ಒಳ್ಳೆಯ ಉದ್ದೇಶವಿದೆ ಆದರೆ ಅದರ ದುರುಪಯೋಗವಾಗುತ್ತದೆ ಏನೋ ಎನ್ನುವ ಆತಂಕ ಬಹಳಷ್ಟು ರೈತರಲ್ಲಿದೆ. ಉದಾಹರಣೆಗೆ ನಮ್ಮ ನವಲಗುಂದ ತಾಲ್ಲೂಕಿನಲ್ಲಿ ಬಳ್ಳೂರ್‌ವಾಡ್ ಗ್ರಾಮದಲ್ಲಿ 868 ಎಕರೆ ಜಮೀನಿದ್ದು, ನೀರಾವರಿ ಸಹಕಾರ ಸಂಘ ಮಾಡುತ್ತೇನೆಂದು ಇಬ್ಬರು ಮುಂದೆ ಬಂದಿದ್ದಾರೆ. ಬಸವೇಶ್ವರ ಮಲಪ್ರಭಾ ನೀರು ಬಳಕೆದಾರರ ಸಂಘ ಸ್ಥಾಪನೆಗೆ ಮಹಾದೇವಪ್ಪ ಜಾನ್‌ವಾಡ್ ಎಂಬುವರು ಅರ್ಜಿಯನ್ನು ಕೊಟ್ಟಿದ್ದಾರೆ. ಈ ಪ್ರಮೋಟರ್‌ರವರ ಅರ್ಜಿ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಮುಂದಿದೆ. ಇವರ ಪ್ರಕಾರ, ನಮ್ಮ ಸಂಘ 500 ಎಕರೆ ಜಮೀನನ್ನು ಒಳಗೊಂಡಿದೆ. 101 ಜನ ಸದಸ್ಯರಿದ್ದಾರೆ ಎಂದು ಹೇಳಿದ್ದಾರೆ. ಇನ್ನೊಬ್ಬರು ಚೀಫ್ ಪ್ರೊಮೋಟರ್ ಆದ ಅಗಸನಕೊಪ್ಪ ಎಂಬುವರು ಮಲಪ್ರಭಾ ನೀರು ಬಳಕೆದಾರರ ಸಂಘದ ಹೆಸರಿನಲ್ಲಿ ಅರ್ಜಿಯನ್ನು ಕೊಟ್ಟು ನಮ್ಮ ಸಂಘಕ್ಕೆ 300 ಎಕರೆ ಜಮೀನು ಬರುತ್ತದೆ, 70 ಜನ ಸಂಘದ ಸದಸ್ಯರಿದ್ದಾರೆಂದು ಹೇಳಿದ್ದಾರೆ. ಹೀಗೆ ಇವತ್ತು ಒಂದೇ ಗ್ರಾಮದಲ್ಲಿ ಎರಡು ಸಂಘಗಳು ಸಹಕಾರ ಸಂಘವನ್ನು ರಚಿಸಲು ಮುಂದೆ ಬಂದಿದ್ದಾವೆ. ಬಹುಶಃ ಹೆಚ್.ಕೆ. ಪಾಟೀಲ್‌ರವರು ನವಲಗುಂದ ತಾಲ್ಲೂಕಿನಲ್ಲಿ ಪ್ರವಾಸ ಕೈಗೊಂಡಾಗ ಅವರನ್ನು ಭೇಟಿಯಾಗಿದ್ದೇವೆಂದು ಅವರು ಹೇಳಿದರು. ಹಾಗಾದರೆ ಯಾವ ಸಂಘಕ್ಕೆ ಸರ್ಕಾರ ಆದ್ಯತೆ ಕೊಡಬೇಕೆನ್ನುವ ಪ್ರಶ್ನೆ ಬರುತ್ತದೆ. ನಾನು ಯಾವ ರಾಜಕೀಯ ಪಕ್ಷದ ಹೆಸರು, ಹೇಳುವುದಕ್ಕೆ ಇಚ್ಛಿಪಡುವುದಿಲ್ಲ. ಆದರೆ ಇಲ್ಲಿ ಒಂದು ರಾಜಕೀಯ ಹಿತಾಸಕ್ತಿಯನ್ನು ಕಾಪಾಡುವ ಸಲುವಾಗಿ, ಯಾರು ರಾಜಕೀಯವಾಗಿ ಪ್ರಾಬಲ್ಯರಿರುತ್ತಾರೆ ಅಂಥ ಸಂಘ ನೋಂದಣಿಯಾಗುತ್ತದೆ. ಉದಾಹರಣೆ ಮಲಪ್ರಭಾ ನೀರು ಬಳಕೆದಾರರ ಸಂಘ ಇವರದು 70 ಜನ ಸದಸ್ಯರಿರುವುದು, 300 ಎಕರೆ ಜಮೀನು ಇರುವುದಾಗಿದೆ. ಆದರೆ 101 ಜನ ಸದಸ್ಯರಿದ್ದು 500 ಎಕರೆ ಜಮೀನು ಇರುವ ಬಸವೇಶ್ವರ ಮಲಪ್ರಭಾ ನೀರು ಬಳಕೆದಾರರ ಸಂಘ ನೋಂದಣಿಯಾಗಲಿಲ್ಲ. ಹೀಗಾಗಿ ಯಾರು ರಾಜಕೀಯವಾಗಿ ಪ್ರಾಬಲ್ಯರಾಗಿದ್ದಾರೆ ಅವರು ತಮ್ಮ ಸಂಘವನ್ನು ನೋಂದಣಿ ಮಾಡಿಸಿಕೊಂಡಿದ್ದಾರೆ. ಬಸವೇಶ್ವರ ಮಲಪ್ರಭಾ ನೀರು ಬಳಕೆದಾರರ ಸಂಘವನ್ನು ಒಂದು ಸಾರಿಯು ಅಧಿಕಾರಿಗಳು ಕರೆಯಲಿಲ್ಲ, ಅವರ ಅಹವಾಲನ್ನು ಕೇಳಲಿಲ್ಲ, ಅವರಲ್ಲಿ ಏನು ಲೋಪದೋಷ-ಗಳಿದ್ದಾವೆನ್ನುವುದನ್ನು ಹೇಳಲಿಲ್ಲ, ನೋಟಿಸ್ ಅನ್ನು ಕೊಡಲಿಲ್ಲ, ಹಾಗಾದರೆ ಇವರ ಗತಿಯೇನು? ಇವರು ಎಲ್ಲಿಗೆ ಹೋಗಬೇಕು? ಅವರು ನಿನ್ನೆ ನನ್ನ ಹತ್ತಿರ ಬಂದಿದ್ದರು, ಇನ್ನೊಂದು ಸಂಘದವರು ರೈತರ ನಕಲಿ ಹೆಬ್ಬೆಟ್ಟು ಸಹಿಗಳನ್ನು ತೆಗೆದುಕೊಂಡು ಸಂಘವನ್ನು ನೋಂದಣಿ ಮಾಡ್ಡಿದ್ದಾರೆಂದು ಆಪಾದನೆ ಮಾಡಿದರು. ಇಂತಹ ಸಂದರ್ಭದಲ್ಲಿ ಏನು ನಿರ್ಣಯ ತೆಗೆದುಕೊಳ್ಳುತ್ತೀರಿ? ತೀರ್ಮಾನ ಮಾಡುವವರು ಯಾರು? ತಾವು ಎರಡು ಸಂಘಕ್ಕೂ ಅವಕಾಶ ಕೊಡುತ್ತೀರಾ? ಹೀಗೆ ಇಬ್ಬರು ಕ್ಲೇಂ ಮಾಡಿದಾಗ

ಯಾರಿಗೆ ಆದ್ಯತೆ ಕೊಡುತ್ತೀರಿ? ಮಾರ್ಗಸೂಚಿ ಏನು? ಹೀಗಾಗಿ ಇಲ್ಲಿ ರಾಜಕೀಯ ಹಿತಾಸಕ್ತಿ ಕಾಪಾಡುವಂತಹ ಕೆಲಸವಾಗುತ್ತದೆ, ಇದಾಗಬಾರದೆನ್ನುವುದು ನನ್ನ ಕಳಕಳಿ. ನಾನು ಒಂದು ನಿರ್ದಿಷ್ಟವಾದ ಪ್ರಕರಣವನ್ನು ಹೇಳಿದ್ದೇನೆ, ಇವತ್ತು ಮಾನ್ಯ ನೀರಾವರಿ ಮಂತ್ರಿಗಳಾದ ಹೆಚ್.ಕೆ. ಪಾಟೀಲ್‌ರವರು ಬಹಳ ಕಳಕಳಿಯಿಂದ ಈ ಒಂದು ಮಸೂದೆಯನ್ನು ತಂದಿದ್ದಾರೆ ಅದರ ಬಗ್ಗೆ ಎರಡು ಮಾತಿಲ್ಲ. ಆದರೆ ನಾನು ಒಂದು ಉದಾಹರಣೆಯನ್ನು ಹೇಳಿದ್ದೇನೆ, ವಾಸ್ತವಾಂಶವನ್ನು ಅವರ ಮುಂದೆ ಇಟ್ಟಿದ್ದೇನೆ ಇದನ್ನು ಹೇಗೆ ಬಗೆಹರಿಸುತ್ತಾರೊ ಬಗೆಹರಿಸಲಿ. ಇದೆ ರೀತಿಯ ಸಮಸ್ಯೆ ನವಲಗುಂದ ತಾಲ್ಲೂಕಿನ ಹೆಬ್ಬಾಳ ಗ್ರಾಮದಲ್ಲಿ, ಶಿಶುವಿನಹಳ್ಳಿಯಲ್ಲಿ ತಿರ್ಲಾಪುರದಲ್ಲಿ ಇದ್ದು, ಎರಡೆರಡು ಸಂಘಗಳು ಮುಂದೆ ಬಂದಿದ್ದಾವೆ, ಆದರೆ ರಾಜಕೀಯವಾಗಿ ಪ್ರಾಬಲ್ಯವಿರುವ ಸಂಘಗಳು ನೋಂದಣಿಯಾಗುತ್ತಿವೆ. ಇನ್ನು ಬೇರೆ ಬೇರೆ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಸಮಸ್ಯೆಗಳಿದ್ದಾವೊ ನನಗೆ ಗೊತ್ತಿಲ್ಲ. ಈ ರಾಜಕೀಯ ಹಿತಾಸಕ್ತಿಯನ್ನು ಕಾಯ್ದುಕೊಳ್ಳುವ ಸಲುವಾಗಿ ಈ ಸಂಘಸಂಸ್ಥೆಗಳು ಬೆಳೆಯಬಾರದು, ರೈತರ ಅನುಕೂಲಕೋಸ್ಕರವಾಗಿ ಈ ಸಂಘಗಳು ಬೆಳೆಯಬೇಕು, ಇದು ನನ್ನ ಮೂಲ ಕಳಕಳಿ ಇದ್ದು ಅವತ್ತು ನಾನು ಆತಂಕವನ್ನು ವ್ಯಕ್ತಪಡಿಸಿದೆ, ಈ ಮಸೂದೆಯ ಕಳಕಳಿಯು ಕೂಡ ಅದೇ ಆಗಿದೆ. ಈ ರೀತಿ ಒಂದು ರಾಜಕೀಯ ಸಂಸ್ಕೃತಿ ಬೆಳೆಯಲಾರದ ಯಾವ ಕ್ರಮಗಳನ್ನು ಕೈಗೊಳ್ಳಬೇಕೆನ್ನುವ ಬಗ್ಗೆ ಮಾನ್ಯ ನೀರಾವರಿ ಮಂತ್ರಿಗಳು ಚಿಂತನೆ ಮಾಡಲಿ, ಆ ಬಗ್ಗೆ ಅವರು ತನಿಖೆ ಮಾಡಲಿ, ವಿಚಾರ ಮಾಡಿ ಅದನ್ನು ಸರಿಪಡಿಸುವ ಕೆಲಸವನ್ನು ಮಾಡಲಿ, ಇಲ್ಲಿರುವ ಸಮಸ್ಯೆಗಳಿಗೆ ಸ್ಪಷ್ಟನೆ ನೀಡಲಿ, ಇದರ ಮುಖಾಂತರ ನಮ್ಮ ರಾಜ್ಯದಲ್ಲಿ ಹೊಸ ಬದಲಾವಣೆ ಬರಲಿ, ಬೇರೆ ರಾಜ್ಯದಲ್ಲಿ ಈ ಸಂಸ್ಥೆಗಳು ಇರುವ ಬಗ್ಗೆ ಅಲ್ಲಿ ಯಶಸ್ವಿಯಾಗಿ ಪ್ರಯೋಗ ಮಾಡಿರುವ ಬಗ್ಗೆಯು ಕೂಡ ಈ ಸಮಸ್ಯೆಗಳನ್ನು ಬಗೆಹರಿಸಿ ಈ ಮಸೂದೆಯನ್ನು ಪಾಸ್ ಮಾಡಿಕೊಳ್ಳಲಿ ಎಂದು ಹೇಳಿ ಸ್ಪಷ್ಟನೆ ಮಾಡಲಿ ನಂತರ ಹಲವಾರು ವಿಚಾರಗಳ ಬಗ್ಗೆ ಚರ್ಚೆ ಮಾಡೋಣವೆಂದು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ನೀರಾವರಿ ಸಚಿವರು, ನೀರಾವರಿ ಅಚ್ಚುಕಟ್ಟುದಾರರ ಕೆರೆಗಳ ಆಶ್ರಯದಲ್ಲಿ ಸಹಕಾರ ಸಂಘಗಳನ್ನು ಮಾಡಿ ಅನುಕೂಲ ಮಾಡಿಕೊಂಡು ಒಂದು ತಿದ್ದುಪಡಿಯನ್ನು ತಂದು ಆ ಮೂಲಕ ರೈತರ ನೆರವಿಗೆ ಬರಬೇಕೆನ್ನುವ ಉದ್ದೇಶದಿಂದ ಈ ಮಸೂದೆಯನ್ನು ತಂದಿರುವುದಕ್ಕಾಗಿ ಮಾನ್ಯ ಸಚಿವರನ್ನು ಅಭಿನಂದಿಸುತ್ತೇನೆ. ಕೆಲವು ಸಂಶಯಗಳನ್ನು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದು ನಮ್ಮಲ್ಲು ಕೂಡ ಆಗಿದೆ. ನಮ್ಮದು ಬಯಲುಸೀಮೆಯಾದರೂ ಕೆಲವು ನೀರಾವರಿ ಪ್ರದೇಶಕ್ಕೂ ನಮಗೂ ವ್ಯತ್ಯಾಸವಿದೆ. ಬಯಲುಸೀಮೆಯಲ್ಲಿ ಹೋಬಳಿಗೆ ಹತ್ತಾರು ಕೆರೆಗಳಿರುತ್ತವೆ. ಕೆರೆಗಳನ್ನೆಲ್ಲಾ ಸೇರಿಸಿ ಒಟ್ಟು ಪ್ರದೇಶವನ್ನು ಆಧಾರಿಸಿ ನೀವು ಸಹಕಾರ ಸಂಘವನ್ನು ಮಾಡುವುದೆಂದು ತೀರ್ಮಾನಿಸುವುದಾದರೆ, ಈಗಾಗಲೆ ಮುಂದಾಳುಗಳಾಗಿ ಸಹಕಾರ ಸಂಘಗಳನ್ನು ಮಾಡುತ್ತೇವೆಂದು ಅಲ್ಲಿ ಯಾರು ಅಚ್ಚುಕಟ್ಟುದಾರರು ಇದ್ದಾರೆ, ಅದಕ್ಕೆ ರೂಪರೇಷೆಗಳೇ ಇಲ್ಲ, ಈಗಾಗಲೇ ಸಹಕಾರ ಸಂಘಗಳು ಪ್ರಾರಂಭವಾಗಿದೆ, ಇದು ಯಾವ ಶಾಸಕರ ಗಮನಕ್ಕೂ ಬಂದಿಲ್ಲ. ಕೆಲವರ ಗಮನಕ್ಕೆ ಬಂದಿದೆಯೋ ಇಲ್ಲವೊ ಗೊತ್ತಿಲ್ಲ ನಮ್ಮ ಗಮನಕ್ಕಂತು ಇದು ಬಂದಿಲ್ಲ. ಯಾರು ಕೊ-ಆಪರೇಟಿವ್ ಡೆವಲಪ್‌ಮೆಂಟ್ ಆಫೀಸರ್ಸ್ ಇದ್ದಾರೆ,

ಜಿಲ್ಲಾಮಟ್ಟದ ಅಥವಾ ಕಾರ್ಯನಿರ್ವಹಕ ಅಭಿಯಂತರರು ಹೋಗಿ ಅಲ್ಲಿ ಕೆಲಸ ಮಾಡಬೇಕೆಂದು ಏನು ತಾವು ಸೂಚಿಸಿದ್ದೀರಿ ಅದರ ಬಗ್ಗೆ ಸ್ಥಳೀಯವಾಗಿ ಅಲ್ಲಿ ಒಂದು ಕರಪತ್ರವನ್ನು ಹಾಕಿಲ್ಲ, ಮತ್ತೆ ಇದು ಜೇಬಿನಲ್ಲಿರುವ ಸಹಕಾರ ಸಂಘಗಳಾಗುತ್ತವೆ. ಮಾನ್ಯ ಮಂತ್ರಿಗಳಿಗೆ ಆ ಕ್ಷೇತ್ರದಲ್ಲಿ ಅಪಾರವಾದ ಅನುಭವವಿದೆ, ಸಾಕಷ್ಟು ಸಹಕಾರ ಸಂಘಗಳು ಬೇರೆ ಬೇರೆ ರೀತಿಯಲ್ಲಿ ನಡೆದಿರುವುದನ್ನು ನೋಡಿದ್ದೀರಿ, ಇವತ್ತು ದೊಡ್ಡ ಉದ್ದೇಶವನ್ನು ಇಟ್ಟುಕೊಂಡು ಯಾರು ನೀರನ್ನು ಬಳಸುತ್ತಾರೆ, ಅವರಿಗೆ ನಾಳೆ ನೀವು ತೆರಿಗೆಯನ್ನು ವಿಧಿಸುತ್ತೀರಿ, ಬಂದ ಹಣವನ್ನು ಅಭಿವೃದ್ಧಿ ದಿಶೆಯಲ್ಲಿ ತೊಡಗಿಸುವವರಿದ್ದೀರಿ ಇದಕ್ಕೆ ಐದು ಲಕ್ಷ ರೂಪಾಯಿ ಎಷ್ಟು ಹಣವನ್ನು ಬಂಡವಾಳವಾಗಿ ತೊಡಗಿಸುವವರಿದ್ದೀರಿ, ಪ್ರತಿಯೊಂದು ಸಹಕಾರ ಸಂಘಕ್ಕೆ ಅದೆಷ್ಟು ಹಣವನ್ನು ನೀಡುತ್ತೀರಿ ಎಂಬುದನ್ನು ಇವತ್ತು ಹೇಳಬೇಕು. ಇವತ್ತು ನಮ್ಮ ಭಾಗದಲ್ಲಿ ಏನು ತಿಳಿದುಕೊಂಡಿದ್ದಾರೆಂದರೆ, ಹಾಪ್‌ಕಾಮ್ಸ್‌ನಲ್ಲಿ ಆಗಲಿ ಕೆಎಂಎಫ್‌ಗಳು ಹೀಗೆ ನಮ್ಮಲ್ಲಿ ಬೇರೆ ಬೇರೆ ರೀತಿಯ ಸಹಕಾರ ಸಂಘಗಳಿದ್ದಾವೆ. ಸಹಕಾರ ಸಂಘಗಳನ್ನು ಪ್ರಾರಂಭ ಮಾಡಲು ಬೇರೆ ಬೇರೆ ವಿಧಾನಗಳಿದ್ದಾವೆ, ಯಾರು ಚೀಫ್ ಪ್ರೊಮೋಟರ್, ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ನಿರ್ದೇಶಕರು ಯಾರ್‍ಯಾರು ಆಗಬೇಕು ಎನ್ನುವ ಕಾನ್ಸೆಪ್ಟ್ ಇದೆ. ಈ ಕಾನ್ಸೆಪ್ಟ್ ಅನ್ನು ಬಿಟ್ಟು, ಇವರೆಲ್ಲಾ ಇವತ್ತು ಏನು ತಿಳಿದುಕೊಂಡಿದ್ದಾರೆಂದರೆ ಮಾನ್ಯ ವಿರೋಧಪಕ್ಷದ ನಾಯಕರಾದವರು ಹೇಳಿದಂತೆ, ಈ ಸಹಕಾರ ಸಂಘಗಳಿಗೆ ಸರ್ಕಾರ ಬಹಳಷ್ಟು ಹಣವನ್ನು ಕೊಡುತ್ತದೆ, ಅದನ್ನು ಹೇಗಾದರು ನಡೆಸಿಕೊಂಡು ಹೋಗಬಹುದೆಂದು ತಿಳಿದುಕೊಂಡಿದ್ದಾರೆ. ಇವತ್ತು ಹಿರಿಯ ಸಚಿವರಾದ ಹೆಚ್.ಕೆ. ಪಾಟೀಲ್‌ರವರಿದ್ದೀರಿ, ಸಹಕಾರಿ ಮನೆತನದಿಂದ ಬಂದವರು ಈ ಕಾನೂನಿಂದ ದುರುಪಯೋಗವಾಗಬಾರದು. ತಾವು ಒಳ್ಳೆಯ ಉದ್ದೇಶವನ್ನು ಇಟ್ಟುಕೊಂಡಿದ್ದೀರಿ, ನಾವೇನು ಇವತ್ತು ಕಾಣುತ್ತಿದ್ದೇವೆಂದರೆ, ಇವತ್ತು ಡೀಸಿಲ್ಟಿಂಗ್ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾರಂತೆ, ಹಣವನ್ನು ಇದರ ಮೂಲಕ ತೊಡಗಿಸಿ ಹೊರಗೆ ಹೋಗುತ್ತದಂತೆ, ನಾವೇ ಎಲ್ಲರಿಗೆ ಗುತ್ತಿಗೆಯನ್ನು ಕೊಡಬಹುದಂತೆ, ಈ ರೀತಿ ಮಾತನಾಡಿಕೊಳ್ಳುತ್ತಿದ್ದಾರೆ. ಇವರು ಹೇಳಿದಹಾಗೆ ನಾನು ಕಳೆದ ವಾರ ನನ್ನ ಕ್ಷೇತ್ರಕ್ಕೆ ಹೋದರೆ ಆಗಲೇ 5 ಸಂಘಗಳು ಪ್ರಾರಂಭವಾಗಿದ್ದಾವೆ, ಡೂಪ್ಲಿಕೇಷನ್ ಪ್ರಾರಂಭವಾಗಿದೆ, ಗಲಾಟೆ ಪ್ರಾರಂಭವಾಗಿದೆ. ಅವರು ಸಹಕಾರ ಸಂಘಗಳನ್ನು ಮಾಡಿದ್ದಾರಂತೆ, ಅವರು ಅಚ್ಚುಕಟ್ಟುದಾರರಲ್ಲ, ಅವರು ಜಮೀನುದಾರರೇ ಅಲ್ಲ, ಅವರ ಮನೆಯವರನ್ನೇ ಐದು ಜನರನ್ನು ಸದಸ್ಯರನ್ನಾಗಿ ಮಾಡಿಕೊಂಡಿದ್ದಾರಂತೆ ಹೀಗೆಲ್ಲಾ ಕೇಳುತ್ತಿದೆ. ಸದಸ್ಯತ್ವದ ಹಣವನ್ನು ಒಬ್ಬರೇ ಬೇರೆಯವರ ಪರವಾಗಿ ತುಂಬುವುದು ಇವೆಲ್ಲಾ ನಡೆದಿದೆ. ತಮಗೆ ಗೊತ್ತಿದೆ, ಇವೆಲ್ಲಾ ಈ ಕ್ಷೇತ್ರದಲ್ಲಿ ನಡೆಯುವಂಥಾದ್ದೇ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ : ಇದು ನಮ್ಮ ಕ್ಷೇತ್ರದಲ್ಲೂ ಕೂಡ ನಡೆದಿದೆ, ಎಲ್ಲಾ ಕಡೆಯೂ ಶುರುವಾಗಿದೆ. ಈ ಕಾಯಿಲೆಗೆ ಕೊನೆಯಿಲ್ಲವೆಂದು ಕಾಣುತ್ತದೆ. ಮುಂದೆ ಇದು ಒಂದು ದೊಡ್ಡ ಗಂಡಾಂತರವೇ ಆಗಬಹುದೆನ್ನುವ ವಿಚಾರ ನಮ್ಮ ತಲೆಯಲ್ಲಿ ಬಂದಿದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಹೆಚ್.ಕೆ. ಪಾಟೀಲರು ಅಂಥಾದ್ದಕ್ಕೆಲ್ಲಾ ಅವಕಾಶ ಮಾಡಿಕೊಡಲಾರರು ಎಂದ ನಾನು ಅಂದುಕೊಂಡಿದ್ದೇನೆ. ಇದರ ಮೂಲ ಸಹಕಾರ ಇಲಾಖೆಯಿಂದ ಪ್ರಾರಂಭವಾಗುವಂಥಾದ್ದು. ಆದ್ದರಿಂದ ಅವರೆಲ್ಲಾ ಕೋ-ಆರ್ಡಿನೇಟ್, ಸಮನ್ವಯ

ಮಾಡಿಕೊಳ್ಳಬೇಕಾಗುತ್ತದೆ. ನೀರಿನ ಉಪಯೋಗಕ್ಕಾಗಿ ಮಾಡಿಕೊಳ್ಳುವಂಥ ಸಹಕಾರ ಸಂಘದ ವ್ಯವಸ್ಥೆ ತಪ್ಪು ದಾರಿ ಹಿಡಿಯಬಾರದು ಎನ್ನುವುದು ನಮ್ಮ ಕಳಕಳಿ. ಸದುದ್ದೇಶದಿಂದ ಮಾಡುತ್ತಿರುವಂಥಾದ್ದು ಇದು. ಸದುದ್ದೇಶ ಹೋಗಿ ಕೆಟ್ಟ ಉದ್ದೇಶಗಳಿಗೆ ಬಳಸಿಕೊಂಡು, ಇದರ ದುರುಪಯೋಗವಾಗಿ, ಹಣ ಸಿಗುತ್ತದೆ ಎಂದು ಎಲ್ಲರೂ ಹಣದ ದಾಹದಿಂದ ಹೋಗಿ ನಾವು ಏನೋ ಮಾಡುತ್ತೇವೆ ಎಂದು ಈಗಾಗಲೇ ಪ್ರಚಾರ ಸಿಕ್ಕಿಬಿಟ್ಟಿದೆ. ಅದಕ್ಕೆ ಅವಕಾಶ ಮಾಡಿಕೊಡಬಾರದು. ಈ ಸಹಕಾರ ಸಂಘಗಳಲ್ಲಿ ನಮ್ಮನ್ನು ಇನ್‌ವಾಲ್ವ್ ಮಾಡಿಕೊಂಡಿಲ್ಲ. ಹೋಬಳಿ ಮಟ್ಟದಲ್ಲಿ ಈಗಾಗಲೇ ಅವರೇ ಮಾಡಿಕೊಂಡಿದ್ದಾರೆ. ಏಕೆಂದರೆ ಇದನ್ನು ಪ್ರಚುರಪಡಿಸಿಲ್ಲ. ಇವತ್ತು ಈ ಮಸೂದೆ ಇಲ್ಲಿ ಪಾಸ್ ಆಗಿ ಹೋಗುತ್ತಿದೆ. ಆದರೆ ಇದಕ್ಕೆ ಮೊದಲೇ ಎಲ್ಲ ತಯಾರಿ ನಡೆದುಬಿಟ್ಟಿದೆ. ಆದ್ದರಿಂದ ತಮ್ಮ ಅಪಾರ ಅನುಭವದ ಹಿನ್ನಲೆಯಲ್ಲಿ ದಯಮಾಡಿ ಈ ಲೋಪದೋಷಗಳು ಆಗದೇ ಇರುವ ರೀತಿಯಲ್ಲಿ ತಾವು ಕ್ರಮ ತೆಗೆದುಕೊಳ್ಳಬೇಕು. ರೈತನಿಗೆ ಒಳ್ಳೆಯದು ಆಗಬೇಕು ಎನ್ನುವ ದೃಷ್ಟಿಯಿಂದ ನೀರನ್ನು ಉಪಯೋಗ ಮಾಡಿಕೊಳ್ಳುವಂಥಾದ್ದಕ್ಕೆ ಈ ತಿದ್ದುಪಡಿಯ ಮೂಲಕ ಸಹಕಾರ ಸಂಘಗಳಿಗೆ ಬಹಳ ಪವರ್ಸ್ ಕೊಡುತ್ತಿದ್ದೀರಿ. ನೀರಿನ ನಿಯಂತ್ರಣ ಮಾಡುವಂಥಾದ್ದು, ರೈತನು ಬೆಳೆದ ನಂತರ ಫಸಲು ಬಂದು ಕಠಾವು ಆದಮೇಲೆ ಅವನಿಂದ ವಸೂಲು ಮಾಡಿ ವಾಪಸ್ಸು ಹಣ ತುಂಬುವುದಕ್ಕೆ ಪವರ್ಸ್ ಕೊಡುತ್ತಿದ್ದೀರಿ. ಈ ರೀತಿ ತುಂಬಿದ ಹಣ ರೈತನಿಗೆ ನೆರವಾಗುವಂತಾಗಬೇಕು. ಆದ್ದರಿಂದ ಸಂಶಯಗಳಿಗೆ ಅವಕಾಶ ಇಲ್ಲದ ರೀತಿಯಲ್ಲಿ ಒಳ್ಳೆಯ ಉದ್ದೇಶದಿಂದ ಸಹಕಾರ ಸಂಘಗಳು ಸ್ಥಾಪನೆಯಾಗಲಿ, ಒಳ್ಳೆಯದಾಗಲಿ ಎಂದು ಹೇಳುತ್ತೇನೆ. ನಮ್ಮ ಕಡೆ ಇರುವುದು ಚಿಕ್ಕ ಕೆರೆಗಳು. 100-150-200 ಎಕರೆ ಪ್ರದೇಶಕ್ಕೆ ಅಚ್ಚುಕಟ್ಟು ಇರುತ್ತದೆ. ಇದನ್ನು ಪೂಲ್ ಮಾಡಿ ಇಷ್ಟು ಎಕರೆ ಎಂದು ಆದಾಗ ಅದನ್ನು ಸೇರಿಸಿ ಮಾಡುವಂಥಾದ್ದು ಆಗಬೇಕು. ಒಟ್ಟಾರೆ ಒಳ್ಳೆಯದು ಆಗಬೇಕು ಎಂದು ಈ ಸಂದರ್ಭದಲ್ಲಿ ಮಾನ್ಯ ಸಚಿವರಿಗೆ ತಮ್ಮ ಮೂಲಕ ತಿಳಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) : ಮಾನ್ಯ ಉಪಾಧ್ಯಕ್ಷರೇ, ಮಧ್ಯಮ ಮತ್ತು ಭಾರೀ ನೀರಾವರಿ ಸಚಿವರು ತಂದಿರುವಂಥ ಈ ಅಧಿನಿಯಮವನ್ನು ನಾನು ಸ್ವಾಗತ ಮಾಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಬಚ್ಚೇಗೌಡರು ವ್ಯಕ್ತಪಡಿಸಿರುವಂಥ ಕೆಲವು ಅನುಮಾನಗಳು ನನ್ನ ಮನಸ್ಸಿನಲ್ಲಿ ಸಹ ಇದೆ. ಇದರಲ್ಲಿ ಎರಡು ಸಹಕಾರ ಸಂಘಗಳಿಗೆ ಅವಕಾಶವಿದೆ. ಅದನ್ನು ಮಾಡಬಾರದು. ಏಕೆಂದರೆ ಒಂದೊಂದು ಗ್ರಾಮದಲ್ಲಿ ಎರಡೆರಡು ಸಹಕಾರ ಸಂಘಗಳಾದಾಗ ಪೈಪೋಟಿ ಹೆಚ್ಚಾಗುತ್ತದೆ. ತಾವು ಸ್ವತಃ ಸಹಕಾರಿಗಳಾದುದರಿಂದ ಸಹಕಾರ ಸಂಘಗಳ ಸಮಸ್ಯೆಗಳೇನು ಎನ್ನುವುದನ್ನು ತಾವು ಅರಿತುಕೊಂಡಿದ್ದೀರಿ. ರೂಲ್ಸ್ ಫ್ರೇಮ್ ಮಾಡುವಾಗ, ಈ ಸಮಸ್ಯೆಗಳನ್ನು ಪರಿಹಾರ ಮಾಡಬೇಕು. ಒಂದೇ ಸಹಕಾರ ಸಂಘ ಇರುವಂಥದ್ದಾಗಬೇಕು ಮತ್ತು ಈ ಸಹಕಾರ ಸಂಘಕ್ಕೆ ಪಕ್ಷದ ರಾಜಕಾರಣ ಬರಲು ಅವಕಾಶವನ್ನು ಕೊಡಬಾರದು. ರೈತರ ಅನುಕೂಲಕ್ಕಾಗಿ, ನೀರಿನ ಬಳಕೆಗಾಗಿ ಮಾಡುತ್ತಿರುವ ಈ ಸಹಕಾರ ಸಂಘಗಳಲ್ಲಿ ನಾಮಿನೇಷನ್‌ಗೆ (ನಾಮನಿರ್ದೇಶನಕ್ಕೆ) ದಯವಿಟ್ಟು ಅವಕಾಶವನ್ನು ಕೊಡಬೇಡಿ. ಕಾನೂನಿನಲ್ಲಿ ಇದು ಇದ್ದರೂ ಸಹ ಇದನ್ನು ಬದಲಾವಣೆ ಮಾಡಬೇಕಾಗುತ್ತದೆ. ರೈತರ ಭೂಮಿಗೆ ನೀರು ಕೊಡುವಂಥಾದ್ದರಲ್ಲಿ ನಾಮಿನೇಷನ್‌ಗೆ ಅವಕಾಶ ಕೊಟ್ಟರೆ ಅವರವರಲ್ಲೇ ಜಗಳ ಮಾಡಿಕೊಳ್ಳವಂಥಾದ್ದು, ಇದನ್ನು ಸೂಪರ್‌ಸೀಡ್ ಮಾಡುವಂಥಾದ್ದು ಆಗುತ್ತದೆ. ಇದಕ್ಕೆ ಅವಕಾಶ

ಕೊಟ್ಟರೆ, ತಾವು ಯಾವ ಉದ್ದೇಶದಿಂದ ಈ ಕಾನೂನನ್ನು ತರುತ್ತಿದ್ದೀರಿ ಅದರ ಉದ್ದೇಶವೇ ವಿಫಲವಾಗುತ್ತದೆ ಎಂದು ನನ್ನ ಅನಿಸಿಕೆ. ಆದ್ದರಿಂದ ರೂಲ್ಸ್ ಫ್ರೇಮ್ ಮಾಡುವಾಗ ಇದರ ಬಗ್ಗೆ ಹೆಚ್ಚಿನ ಗಮನ ಕೊಟ್ಟು, ಗ್ರಾಮಗಳಲ್ಲಿ ಯಾವ ಸಮಸ್ಯೆಗಳು ಉದ್ಭವವಾಗಬಹುದು ಎನ್ನುವುದನ್ನು ಮನಗಂಡು ಅದಕ್ಕೆ ಈಗಲೇ ಪರಿಹಾರವನ್ನು ಆಲೋಚನೆ ಮಾಡಬೇಕು. ಇದರಲ್ಲಿ ನೀರಾವರಿ ಇಲಾಖೆ ಮತ್ತು ಸಹಕಾರ ಇಲಾಖೆಗಳ ಕೋ-ಆರ್ಡಿನೇಷನ್ ಚೆನ್ನಾಗಿ ಇರಬೇಕಾಗುತ್ತದೆ. ಸಂಪೂರ್ಣವಾಗಿ ಸಹಕಾರ ಇಲಾಖೆಗೆ ಕೊಟ್ಟರೂ ಅದು ನಡೆಯುವುದಿಲ್ಲ. ಅದರ ಮೇಲೆ ನೀರಾವರಿ ಇಲಾಖೆಯವರ ಸಂಪೂರ್ಣ ಹಿಡಿತವಿರಬೇಕು. ಏಕೆಂದರೆ ಇದನ್ನು ವ್ಯವಸ್ಥೆ ಮಾಡುತ್ತಿರುವವರು ನೀವು. ಸಂಪೂರ್ಣವಾಗಿ ಯಾವ ಇಲಾಖೆಗೆ ಕೊಟ್ಟರೂ ಇದು ನಡೆಯಲು ಸಾಧ್ಯವಾಗುವುದಿಲ್ಲ. ತಮ್ಮ ಹಿಡಿತದಲ್ಲಿ ಇದನ್ನು ಇಟ್ಟುಕೊಂಡು ನಡೆಸಿಕೊಂಡು ಹೋಗುವುದಾದರೆ ಖಂಡಿತವಾಗಿಯೂ ಇದು ಯಶಸ್ವಿಯಾಗುತ್ತದೆ. ಇಲ್ಲದಿದ್ದರೆ ಉಳಿದ ಸಹಕಾರ ಸಂಘಗಳಂತೆ ಇಲ್ಲಿಯೂ ರಾಜಕಾರಣ ಬಂದು ಹಾಳಾಗುತ್ತದೆ. ಅಂದರೆ ನಾನು ಎಲ್ಲ ಸಹಕಾರ ಸಂಘಗಳನ್ನು ದೂಷಣೆ ಮಾಡುವುದಿಲ್ಲ. ಎಲ್ಲಿ ಈ ರೀತಿ ಹಾಳಾಗುತ್ತಿದೆ ಅವುಗಳನ್ನು ಮಾತ್ರ ಹೇಳುತ್ತಿದ್ದೇನೆ. ಅದಕ್ಕೆ ಅವಕಾಶವನ್ನು ಕೊಡಬಾರದು ಎಂದು ಹೇಳಿ, ಪುನಃ ಈ ಅಧಿನಿಯಮವನ್ನು ಸ್ವಾಗತ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

+ಶ್ರೀ ವಿ. ಪಾಪಣ್ಣ (ಹುಣಸೂರು) : ಮಾನ್ಯ ಉಪಾಧ್ಯಕ್ಷರೇ, ನೀರು ಬಳಕೆದಾರರ ಸಂಘಗಳ ಬಗ್ಗೆ ಮಾನ್ಯ ಸಚಿವರು ತಂದಿರುವ ಈ ಒಂದು ಮಸೂದೆಯನ್ನು ಸ್ವಾಗತ ಮಾಡುತ್ತೇನೆ. ಈ ಮಸೂದೆ ಬರುವುದಕ್ಕೆ ಮುಂಚೆಯೇ ಹಲವಾರು ಕಡೆ ಸಹಕಾರ ಸಂಘಗಳು ರಿಜಿಸ್ಟ್ರೇಷನ್ ಆಗಿವೆ. ನನ್ನ ಕ್ಷೇತ್ರದಲ್ಲಿ ಕಳೆದ ವಾರ ಬಂದಂಥ ಒಂದು ಸಮಸ್ಯೆಯನ್ನು ಹೇಳುತ್ತೇನೆ. ಒಂದು ಕರೆಯಲ್ಲಿ 12 ಕಿ.ಮೀ. ವರೆಗೆ ನೀರು ಹೋಗಬೇಕು. ನೀರು ಕಡಿಮೆಯಾದಾಗ 12 ಕಿ.ಮೀ.ವರೆಗೆ ಪೂರ್ಣ ಹೋಗುವುದಿಲ್ಲ. ಸುಮಾರು 4-5 ಕಿ.ಮೀ.ವರೆಗೆ ಇರುವವರು ಮಾತ್ರ ಈ ಸಹಕಾರ ಸಂಘಕ್ಕೆ ಸದಸ್ಯರಾಗಿದ್ದಾರೆ. 12ನೇ ಕಿ.ಮೀ. ನಲ್ಲಿರುವವರಿಗೆ ನೂರಾರು ರೂಪಾಯಿ ಕೊಟ್ಟು ಸದಸ್ಯರಾಗಬೇಕು ಎಂದು ಗೊತ್ತಾಗಿರಲಿಲ್ಲ. ಮೊನ್ನೆಯ ದಿವಸ ಈ ಸಹಕಾರ ಸಂಘ ಒಂದು ನಿರ್ಣಯವನ್ನು ತೆಗೆದುಕೊಂಡಿದೆ. ಅದೇನೆಂದರೆ, 'ನೀರು ಕೊನೆಯ ಹಂತಕ್ಕೆ ಹೋಗುವುದಿಲ್ಲವಾದ್ದರಿಂದ ಅರ್ಧಕ್ಕೆ ತೆಗೆದುಕೊಳ್ಳಬೇಕು' ಎಂದು ಮಾಡಿ, ಇಂಜಿನಿಯರ್‌ರವರನ್ನು ಕರೆದು ನಾವು 4ನೇ ಕಿ.ಮೀ. ಅವರೆಗೆ ನೀರು ಬಿಟ್ಟುಕೊಳ್ಳಬೇಕು, ಕೊನೆಯ ಹಂತಕ್ಕೆ ನೀರು ಬೇಡ ಎಂದು ಮಾಡಿದ್ದೇವೆ ಎಂದು ಹೇಳಿದ್ದಾರೆ. ಇದನ್ನು ಕೇಳಲು ಕೊನೆಯ ಹಂತದ ಸದಸ್ಯರು ಯಾರೂ ಅಲ್ಲಿ ಇಲ್ಲ. ಒಂದು ಕೆರೆಯಲ್ಲಿ ಮತ್ತೊಂದು ಕೆರೆಯ ಅಚ್ಚುಕಟ್ಟುದಾರರು ಸದಸ್ಯರಾಗಿಲ್ಲ. ಈ ಕೆರೆಯ ಅಚ್ಚುಕಟ್ಟುದಾರರೂ, ಆ ಕೆರೆಯ ಸದಸ್ಯರೂ ಇವರ ಆಡಳಿತದಲ್ಲಿ ಬರಬೇಕು. ಪ್ರತಿಯೊಂದು ಕೆರೆಯ ಅಚ್ಚುಕಟ್ಟಿಗೂ ಇಂತಿಷ್ಟು ಜನ ಸದಸ್ಯರು ಇರಬೇಕು, ಕೊನೆಯ ಹಂತದವರೆಗೂ ಇದರ ವ್ಯಾಪ್ತಿ ಇರಬೇಕು ಎಂದು ದಯವಿಟ್ಟು ತಾವು ತಿದ್ದುಪಡಿ ಮಾಡಿ ಮಸೂದೆಯಲ್ಲಿ ಸೇರಿಸಬೇಕು ಎಂದು ಹೇಳುತ್ತೇನೆ. ಈಗಾಗಲೇ ಮಾತನಾಡಿದಂಥ ಗೌರವಾನ್ವಿತ ಸದಸ್ಯರು ಹೇಳಿದಂತೆ, ನಾವು ಈಗಾಗಲೇ 9 ಜನ ಸದಸ್ಯರನ್ನು ಮಾಡಿಕೊಂಡಿದ್ದೇವೆ ಎಂದು ಹೇಳುವಂಥ ಪರಿಸ್ಥಿತಿ ಈಗ ಸಹಕಾರ ಸಂಘಗಳಲ್ಲಿ ನಿರ್ಮಾಣವಾಗಿದೆ. ಸೂಪರ್ ಸೀಡ್ ಆಗುವಂಥಾದ್ದು ಆಗಿದೆ. ರೈತರೇ ನಡೆಸುತ್ತಿರುವ ಹಾಲು ಉತ್ಪಾದಕರ

ಸಹಕಾರ ಸಂಘ ಒಂದನ್ನು ಬಿಟ್ಟರೆ ಉಳಿದೆಲ್ಲ ಸಹಕಾರ ಸಂಘಗಳು ಮುಳುಗಿವೆ. ಯಾವ ಸಹಕಾರ ಸಂಘಗಳೂ ಉದ್ಧಾರವಾಗಿಲ್ಲ. ಎಲ್ಲ ಸಹಕಾರ ಸಂಘಗಳಿಗೆ ರಾಜಕೀಯ ಬೆರೆಸಿ ಹಾಳು ಮಾಡಿಟ್ಟಿದ್ದಾರೆ. ದಯಮಾಡಿ ಇದು ಈ ರೀತಿ ಆಗಬಾರದು ಎಂದು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ತಿಳಿಸಿ, ಅವರು ಈ ಕಡೆ ಚಿಂತನೆ ಮಾಡಿ ಇದನ್ನು ತಿದ್ದುಪಡಿ ಮಾಡಬೇಕು ಎಂದು ಹೇಳಿ, ಈ ಬಿಲ್ಲನ್ನು ತಂದಂಥ ಮಾನ್ಯ ಸಚಿವರಿಗೆ ವಂದಿಸಿ, ಇದನ್ನು ಸ್ವಾಗತ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಎಲ್ಲೆಲ್ಲಿ ಹಾಳಾಗಿದೆ ಎನ್ನುವ ಪಟ್ಟಿಯನ್ನೂ ಹೇಳಿಬಿಡಿ.

ಶ್ರೀ ವಿ. ಪಾಪಣ್ಣ : ಮಾನ್ಯ ಸಹಕಾರ ಸಚಿವರು, ಸರಿಯಾದ ಸಮಯದಲ್ಲಿ ಎಲ್ಲೆಲ್ಲಿ ಹಾಳಾಗಿದೆ ಎಂದು ಹೇಳಿ ಎಂದು ಹೇಳಿದರು. ಮೈಸೂರು ಜಿಲ್ಲಾ ಸಹಕಾರ ಕೇಂದ್ರದಲ್ಲಿ ಆಗಿರುವಂಥ ಲೋಪದ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಕಳೆದ ವರ್ಷ ಹೇಳಿದ್ದರು. ಅಲ್ಲಿ ಒಂದೇ ದಿವಸದಲ್ಲಿ 57 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದಾರೆ. ಈ ಬಗ್ಗೆ ಸದನದಲ್ಲಿ ಮಾನ್ಯ ಸಚಿವರೇ ಉತ್ತರ ಕೊಟ್ಟಿದ್ದಾರೆ, ಲೋಪವಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ಆದರೆ ಇಲ್ಲಿಯವರೆಗೆ ಏನೇನೂ ಕ್ರಮವಾಗಿಲ್ಲ. ಅಲ್ಲಿ ಇಲ್ಲಿಯವರೆಗೂ ಹುಲ್ಲುಗಾವಲಿನಂತೆ ಮೇಯ್ದುಕೊಂಡಿದ್ದಾರೆ ಅದಕ್ಕೆ ಸಂಬಂಧಪಟ್ಟ ಸಚಿವರೂ ಚೆನ್ನಾಗಿ ಹುಲ್ಲುಗಾವಲನ್ನು ಮಾಡಿಕೊಟ್ಟಿದ್ದಾರೆ. ಹೋದವರ್ಷ ಹೇಳಿರುವಂಥಾದ್ದಕ್ಕೆ ಇದುವರೆಗೂ ಕ್ರಮ ತೆಗೆದುಕೊಂಡಿಲ್ಲ. ಸರಿಯಾದ ಸಮಯಕ್ಕೆ ಇದನ್ನು ಕೇಳಿದ್ದಾರೆ, ಇದನ್ನು ಅವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಈ ಬಗ್ಗೆ ಒಂದು ವಿಧೇಯಕವನ್ನು ತೆಗೆದುಕೊಂಡು ಬರುತ್ತಿದ್ದೇವೆ. ತಾವು ದಯವಿಟ್ಟು ಅದಕ್ಕೆ ಓಟನ್ನು ಹಾಕಿ. ಮಾರನೆ ದಿನವೇ ನಿಮ್ಮ ಕೆಲಸ ಮಾಡಿ ಕೊಡುತ್ತೇವೆ.

ಶ್ರೀ ವಿ. ಪಾಪಣ್ಣ : ನೀವು ಯಾವ ರೀತಿ ಬಿಲ್ ತರುತ್ತಿದ್ದೀರಿ ಎನ್ನುವುದು ನಮಗೆ ಈಗಾಗಲೇ ತಿಳಿದಿದೆ. ಮೊದಲು ಕಳ್ಳರನ್ನು ಹಿಡಿದು ಒಳಗೆ ಹಾಕಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಬಿಲ್ ತರುತ್ತಿದ್ದೇವೆ, ಓಟು ಹಾಕಿ ಎಂದು ಮಾನ್ಯ ಸಚಿವರು ಹೇಳಿದರು. ಅಂದರೆ ಪುನಃ ಅದರ ಉದ್ದೇಶ ವಿಫಲವಾಗುತ್ತದೆ. ನೀವು ಬಿಲ್ಲನ್ನು ತಂದು ಒಂದು ಸೊಸೈಟಿ ರಚನೆ ಮಾಡಿ, ಪುನಃ ಸೂಪರ್‌ಸೀಡ್ ಮಾಡಿ ಅಡ್ಮಿನಿಸ್ಟ್ರೇಟರ್ ಅನ್ನು ಅಪಾಯಿಂಟ್ ಮಾಡಿದರೆ ಮತ್ತೆ ಅಲ್ಲಿ ಏನೂ ಉಳಿಯುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಹೆಚ್.ಕೆ. ಪಾಟೀಲರು ಅನುಭವವಿರತಕ್ಕಂಥವರು. ಅವರು ಉತ್ತರ ಕೊಡುತ್ತಾರೆ. ಆದರೆ ಇದು ನೇರವಾಗಿ ಸಹಕಾರಿ ಸಂಘಗಳ ರಿಜಿಸ್ಟ್ರೇಷನ್ ಆಗುವುದರಿಂದ ಈ ಬಿಲ್ಲಿನ ಬಗ್ಗೆ ಅವರೂ ಹೇಳಬೇಕಾಗುತ್ತದೆ.

+ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಉಪಾಧ್ಯಕ್ಷರೇ, ಈ ದಿವಸ ಸರ್ಕಾರದವರು ನಮ್ಮ ರಾಜ್ಯದಲ್ಲಿ ಜಾರಿಯಲ್ಲಿರತಕ್ಕ ಕರ್ನಾಟಕ ನೀರಾವರಿ ಮತ್ತು ಇತರೆ ಕೆಲವು ಕಾನೂನುಗಳಿಗೆ ತಿದ್ದುಪಡಿಯನ್ನು ಮಾಡತಕ್ಕಂಥ ವಿಧೇಯಕವನ್ನು ಮಂಡಿಸಿದ್ದಾರೆ. ಈ ವಿಚಾರದಲ್ಲಿ ನಮ್ಮ ಕೆಲವು ಸ್ಪಷ್ಟವಾದಂಥ ಅಭಿಪ್ರಾಯಗಳು ಇವೆ. ಅದನ್ನು ತಿಳಿಸಬೇಕಾಗಿರತಕ್ಕಂಥಾದ್ದು ನಮ್ಮ ಕರ್ತವ್ಯ ಎಂದು

ನಾನು ಭಾವಿಸಿದ್ದೇನೆ. ನೀರು ಸ್ವಾಭಾವಿಕವಾಗಿ ಪ್ರಕೃತಿದತ್ತವಾಗಿ ದೊರೆಯುತ್ತಿರತಕ್ಕಂಥ ಒಂದು ವಸ್ತು. ನೀರು ಇಲ್ಲದೇ ವ್ಯವಸಾಯ ಮಾಡಲು ಸಾಧ್ಯವೇ ಇಲ್ಲ. ಭೂಮಿ, ಗಾಳಿ, ಸೂರ್ಯನ ಬೆಳಕು ಮತ್ತು ನೀರು ಇವುಗಳು ವ್ಯವಸಾಯಕ್ಕೆ ಅತಿ ಅವಶ್ಯಕವಾಗಿ ಮತ್ತು ಮೂಲಭೂತವಾಗಿ ಬೇಕಾಗಿರುವಂಥವು. ಇವುಗಳಾದ ಮೇಲೆ ಬೀಜ, ಗೊಬ್ಬರ ಮತ್ತು ಉಳಿದಂಥವೆಲ್ಲವೂ ಬರುತ್ತವೆ. ಇದರಲ್ಲಿ ಅತಿ ಅಮೂಲ್ಯವಾಗಿರತಕ್ಕಂಥಾದ್ದು ನೀರು. ಈ ನೀರನ್ನು ನಾವು ನಾನಾ ಮೂಲಗಳಿಂದ ಪಡೆಯುತ್ತೇವೆ. ಈ ನೀರಿಗೆ ಮೂಲವಾಗಿರತಕ್ಕಂಥಾದ್ದು ಮಳೆ. ಮಳೆಯಿಂದ ಬಂದಂಥ ನೀರು ಸಣ್ಣದಾಗಿ ಹರಿದು ನಂತರ ದೊಡ್ಡದಾಗಿ ನದಿಯಾಗಿ ಸಮುದ್ರ ಸೇರುತ್ತದೆ. ಪುನಃ ಅದು ಆವಿಯಾಗಿ ಆಕಾಶಕ್ಕೆ ಹೋಗುತ್ತದೆ. ಇದು ವಾಟರ್ ಸೈಕಲ್. ಇವೆಲ್ಲವೂ ನಡೆದು ಅವಧಿಗೆ ತಕ್ಕಂತೆ ಮಳೆಯೂ ಬರುತ್ತದೆ. ಈ ಸಂದರ್ಭದಲ್ಲಿ ನೀರಿನ ದೃಷ್ಟಿಯಿಂದ ಹೇಳುವುದಾದರೆ ನಮ್ಮ ದೇಶಕ್ಕೆ ಅಷ್ಟೊಂದು ಅದೃಷ್ಟ ಇಲ್ಲ. ಪ್ರಪಂಚದಲ್ಲಿರತಕ್ಕಂಥ ನೀರು ದ್ರವರೂಪದಲ್ಲಿ, ಮಂಜುಗಡ್ಡೆ ರೂಪದಲ್ಲಿ ಹೀಗೆ 2-3 ರೀತಿಯಲ್ಲಿರುತ್ತದೆ. ಇವೆಲ್ಲವನ್ನೂ ಸೇರಿಸಿ ಲೆಕ್ಕ ಹಾಕಿದರೆ, ಪ್ರಪಂಚದಲ್ಲಿರತಕ್ಕಂಥ ನೀರಿನಲ್ಲಿ ಶೇಕಡ 1ರಷ್ಟು ನೀರು ಮಾತ್ರ ನಮ್ಮ ದೇಶದಲ್ಲಿ ಲಭ್ಯವಿದೆ. ಪ್ರಪಂಚದಲ್ಲಿರತಕ್ಕಂಥ ಜನಸಂಖ್ಯೆಯಲ್ಲಿ ಶೇಕಡ 16ರಷ್ಟು ಜನಸಂಖ್ಯೆ ನಮ್ಮ ದೇಶದಲ್ಲಿದ್ದು, ಇದರಲ್ಲಿ ಶೇಕಡ 70ರಷ್ಟು ಜನಸಂಖ್ಯೆ ವ್ಯವಸಾಯ ಮಾಡುತ್ತಿದ್ದು, ಈ ವ್ಯವಸಾಯಕ್ಕೆ ಅತಿ ಮುಖ್ಯವಾಗಿ ಬೇಕಾಗಿರತಕ್ಕಂಥ ನೀರು ನಮಗೆ ದೊರಕುತ್ತಿರತಕ್ಕಂಥಾದ್ದು ಪ್ರಪಂಚದಲ್ಲಿರುವ ನೀರಿನಲ್ಲಿ ಶೇಕಡ 1ರಷ್ಟು ಮಾತ್ರ. ಇದು ವ್ಯವಸಾಯಗಾರನಿಗೆ ಅತಿ ಅಮೂಲ್ಯವಾಗಿರತಕ್ಕಂಥ ಮತ್ತು ಅತಿ ಮುಖ್ಯವಾಗಿ ಬೇಕಾಗಿರತಕ್ಕಂಥ ವಸ್ತುವೆನ್ನುವುದು ನಿರ್ವಿವಾದ. ಇದರ ಸದ್ಬಳಕೆ ಆಗಬೇಕಾಗಿರತಕ್ಕಂಥಾದ್ದು ಬಹಳ ಮುಖ್ಯ. ಇವತ್ತು ನಮ್ಮ ದೇಶದಲ್ಲಿ, ಪ್ರಪಂಚದಲ್ಲೇ ಅತಿ ಹೆಚ್ಚು ಮಳೆ ಬೀಳುತ್ತಿರತಕ್ಕಂಥ ಚಿರಾಪುಂಜಿ ಇದೆ. ಹಾಗೆಯೇ, ಮಳೆಯೇ ಆಗದಿರತಕ್ಕಂಥ ರಾಜಸ್ಥಾನದ ಮರುಭೂಮಿಯೂ ಕೂಡ ಇದೆ. ಹಾಗೆಯೇ, ನಮ್ಮ ರಾಜ್ಯದಲ್ಲೂ ಸಹ ಕನಿಷ್ಠ ಮಳೆ ಬೀಳತಕ್ಕಂಥ ಪ್ರದೇಶವೂ ಇದೆ ಮತ್ತು ಚಿರಾಪುಂಜಿಯಷ್ಟು ಅಲ್ಲದಿದ್ದರೂ, ಅತಿ ಹೆಚ್ಚು ಮಳೆ ಬೀಳತಕ್ಕಂಥ ಆಗುಂಬೆಯೂ ಇದೆ. ಹೀಗೆ ವೈವಿಧ್ಯಮಯವಾಗಿರತಕ್ಕಂಥ ಪರಿಸ್ಥಿತಿ ನಮ್ಮ ರಾಜ್ಯದಲ್ಲೂ ಇದೆ. ಬಿಜಾಪುರದಂಥ ಜಿಲ್ಲೆಗಳಲ್ಲಿ ಕೇವಲ 10-12 ಅಂಗುಲ ಮಳೆ ಆಗತಕ್ಕಂಥಾದ್ದಾದರೆ, ಕೊಡಗು ಮತ್ತು ಪಶ್ಚಿಮ ಘಟ್ಟದ ಕೆಲವು ಜಿಲ್ಲೆಗಳಲ್ಲಿ 200-300 ಅಂಗುಲ ಮಳೆಯಾಗತಕ್ಕಂಥಾದ್ದನ್ನು ನಾವು ನೋಡುತ್ತಿದ್ದೇವೆ. ಈ ರೀತಿ ವೈವಿಧ್ಯಮಯವಾಗಿರತಕ್ಕಂಥ ಪರಿಸ್ಥಿತಿಯಲ್ಲಿ ನೀರಿನ ಸದ್ಬಳಕೆ ಆಗಬೇಕಾಗಿರತಕ್ಕಂಥಾದ್ದು ಬಹಳ ಮುಖ್ಯ. ಈ ಸದ್ಬಳಕೆಗೆ ನೂರಾರು ವರ್ಷಗಳಿಂದ ಪ್ರಯತ್ನಗಳು ಕೂಡ ನಡೆದಿವೆ. ಹಿಂದೆ ನಮ್ಮ ರಾಜ್ಯದಲ್ಲಿ ರಾಜ-ಮಹಾರಾಜರುಗಳು, ಪಾಳೆಗಾರರು ಮತ್ತು ಹಳ್ಳಿಗಳ ಪ್ರಮುಖರಾಗಿರತಕ್ಕಂಥವರು ಕೆರೆಕಟ್ಟೆಗಳನ್ನು ಕಟ್ಟಿರತಕ್ಕಂಥಾದ್ದು ಉಂಟು. ಇವುಗಳಿಂದ ಸಹ ನಾವು ನೀರಾವರಿಯನ್ನು ಮಾಡುತ್ತಿದ್ದೇವೆ. ಕೆಲವು ಸರ್ಕಾರಗಳು ಸಹ ದೊಡ್ಡ ದೊಡ್ಡ ಯೋಜನೆಗಳನ್ನು ಕಟ್ಟಿರತಕ್ಕಂಥಾದ್ದು ಉಂಟು. ನೀರಿಗಾಗಿ ದೇಶದೇಶಗಳಿಗೆ ಯುದ್ಧ ಮತ್ತು ಘರ್ಷಣೆಗಳು ನಡೆದಿರತಕ್ಕಂಥಾದ್ದು ಉಂಟು. ನಮ್ಮ ರಾಜ್ಯದಲ್ಲಿ ಕೂಡ ಅದೇ ಪರಿಸ್ಥಿತಿ ಇದೆ. ಕಾವೇರಿ ನದಿಯ ನೀರಿಗಾಗಿ ನಮ್ಮ ರಾಜ್ಯ ಮತ್ತು ಪಕ್ಕದ ರಾಜ್ಯಕ್ಕೆ ಘರ್ಷಣೆ ನಡೆದಿರುವುದು ಉಂಟು. ಇದು ನ್ಯಾಯಾಲಯದಲ್ಲೂ ನಡೆದಿದೆ, ಹೊರಗಡೆಯೂ ನಡೆದಿದೆ ಮತ್ತು ಬೀದಿಯಲ್ಲೂ

ನಡೆದಿರುವುದು ಉಂಟು. ನಮ್ಮ ರಾಜ್ಯದಲ್ಲಿ ಒಂದು ಕಡೆ ಕಾವೇರಿ ಕಣಿವೆಯಲ್ಲಿರತಕ್ಕಂಥ ನೀರಿಗಾಗಿ ಮತ್ತೊಂದು ಕಡೆ ಕೃಷ್ಣಾ ಕಣಿವೆಯಲ್ಲಿರತಕ್ಕಂಥ ನೀರಿಗಾಗಿ ಘರ್ಷಣೆಗಳು ನಡೆದು ಅದೇ ಒಂದು ಇತಿಹಾಸವಾಗಿರತಕ್ಕಂಥಾದ್ದು ಎಲ್ಲರಿಗೂ ಗೊತ್ತಿದೆ. ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗಾಗಿ ಲಕ್ಷಾಂತರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಯೋಜನೆಗಳನ್ನು ನಿರ್ಮಾಣ ಮಾಡಿರತಕ್ಕಂಥಾದ್ದೂ ಉಂಟು. ಪ್ರಪಂಚದಲ್ಲೇ ಅತಿ ಮುಖ್ಯವಾಗಿರತಕ್ಕಂಥ ಮತ್ತು ಅತಿ ಎತ್ತರ ಹಾಗೂ ವಿಸ್ತಾರವಾಗಿರತಕ್ಕಂಥ ಕೆಲವು ಯೋಜನೆಗಳು ನಮ್ಮ ರಾಜ್ಯದಲ್ಲೂ ಇವೆ. ಇಡೀ ದೇಶದಲ್ಲಿ ಅತೀ ದೊಡ್ಡ ಪ್ರಮಾಣದಲ್ಲಿ ಇರತಕ್ಕಂಥಾದ್ದೆಂದರೆ ಬಾಕ್ರಾನಂಗಲ್ ಯೋಜನೆ. ಈ ಯೋಜನೆಯ ಪ್ರಯೋಜನವನ್ನು ಇವತ್ತೂ ಪಡೆಯಲಾಗುತ್ತಿದೆ. ಬಾಕ್ರಾ-ನಂಗಲ್ ಯೋಜನೆಯಿಂದ ಪಂಜಾಬ್ ಮತ್ತು ಹರಿಯಾಣ ರಾಜ್ಯಗಳಲ್ಲಿ ಶೇಕಡ 98ರಷ್ಟು ನೀರಾವರಿಯಾಗುತ್ತಿರತಕ್ಕಂಥಾದ್ದನ್ನು ನಾವು ನೋಡುತ್ತಿದ್ದೇವೆ. ಅದರಂತೆ ಇವತ್ತು ನಮ್ಮ ರಾಜ್ಯದಲ್ಲಿ ಲೆಕ್ಕ ಹಾಕಿದರೆ ಇಲ್ಲಿಯವರೆಗೆ ನಾವು ಎಷ್ಟು ಭೂಮಿಗೆ ನೀರು ಕೊಡುತ್ತಿದ್ದೇವೆ ಎಂದರೆ ಶೇಕಡ 23 ರಷ್ಟು ಭೂಮಿಗೆ ಮಾತ್ರ ನೀರು ಕೊಡತಕ್ಕಂಥ ಪ್ರಯತ್ನ ನಡೆದಿದೆ. ಇದಕ್ಕೆ ಸಾವಿರಾರು ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡುತ್ತಿದ್ದೇವೆ. ಇನ್ನು ಮುಂದೆಯೂ ಕೂಡ ಸಾವಿರಾರು ಕೋಟಿ ರೂಪಾಯಿಗಳು ಖರ್ಚಾಗಬೇಕಾಗಿರತಕ್ಕಂಥಾದ್ದು ಅವಶ್ಯಕವಾಗಿದೆ. ನಮ್ಮ ರಾಜ್ಯದಲ್ಲಿರತಕ್ಕಂಥ 107 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 47-48 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಮಾತ್ರ ನೀರಾವರಿಯನ್ನು ಕೊಡಲು ಸಾಧ್ಯವಾಗಿದೆ. ನಮ್ಮ ರಾಜ್ಯದಲ್ಲಿರತಕ್ಕಂಥ ಪೊಟೆನ್‌ಷಿಯಲ್ ಅನ್ನು ಬಳಸಿಕೊಳ್ಳಲು ಇನ್ನೂ 10 ವರ್ಷವಾಗುತ್ತದೋ, 20 ವರ್ಷವಾಗುತ್ತದೋ ಅಥವಾ ಎಷ್ಟು ವರ್ಷವಾಗುತ್ತದೆ ಎನ್ನುವುದನ್ನು ಹೇಳುವುದು ಕಷ್ಟ. ಆ ಎಲ್ಲವನ್ನೂ ಬಳಸಿಕೊಂಡರೆ ಸುಮಾರು ಶೇಕಡ 47-48ರಷ್ಟು ಪ್ರದೇಶವನ್ನು ನೀರಾವರಿಗೆ ತರಲು ಸಾಧ್ಯವಾಗುತ್ತದೆ. ಉಳಿದಂಥ ಜಮೀನು ಯಾವತ್ತಿಗೂ ಸಹ ಮಳೆಯ ಆಶ್ರಯದಿಂದಲೇ ವ್ಯವಸಾಯವನ್ನು ಮಾಡಬೇಕಾಗಿರತಕ್ಕಂಥ ಪರಿಸ್ಥಿತಿ ಇದೆ. ನೀರಾವರಿ ಯೋಜನೆಗಳನ್ನು ನಿರ್ಮಾಣ ಮಾಡಿ ಕಾಲುವೆಗಳ ಮೂಲಕ ನೀರನ್ನು ಬಳಸಿಕೊಳ್ಳತಕ್ಕಂಥಾದ್ದು ಒಂದು ಕಡೆ ಆದರೆ, ಇನ್ನೊಂದು ಕಡೆ ಏನೂ ಇಲ್ಲದೇ ಮಳೆಯ ಆಶ್ರಯದಿಂದಲೇ ಬೆಳೆ ಬೆಳೆಯತಕ್ಕಂಥ ಪ್ರದೇಶಗಳು ನಮ್ಮ ರಾಜ್ಯದಲ್ಲಿವೆ. ಅಂದರೆ ನಮ್ಮ ರಾಜ್ಯದಲ್ಲಿ ಕನಿಷ್ಠ ಸುಮಾರು 55 ರಿಂದ 60ರಷ್ಟು ಪ್ರದೇಶ ಶಾಶ್ವತವಾಗಿ ಮಳೆಯಾಧಾರಿತ ಪ್ರದೇಶವಾಗಿಯೇ ಉಳಿಯುತ್ತದೆ. ಎಲ್ಲಾ ಕಡೆಯೂ ನಾವು ನೀರಿಗಾಗಿ ಕಟ್ಟೆ ಕಟ್ಟಲು ಆಗುವುದಿಲ್ಲ, ಯೋಜನೆಗಳನ್ನು ಕಟ್ಟಲು ಆಗುವುದಿಲ್ಲ. ಕನ್ನಂಬಾಡಿಯನ್ನು ತಂದು ಕೋಲಾರದಲ್ಲಿ ಕಟ್ಟಲು ಸಾಧ್ಯವಾಗುವುದಿಲ್ಲ ಅಥವಾ ಆಲಮಟ್ಟಿಯನ್ನು ತಂದು ಚಿತ್ರದುರ್ಗದಲ್ಲಿ ಕಟ್ಟಲು ಸಾಧ್ಯವಿಲ್ಲ. ಎಲ್ಲಿ ನೀರು ಸಿಗುತ್ತದೆ, ಅಲ್ಲಿ ಮಾತ್ರ ನಾವು ಯೋಜನೆಗಳನ್ನು ನಿರ್ಮಾಣ ಮಾಡಬೇಕಾಗುತದೆ. ಈ ರೀತಿ ಯೋಜನೆಗಳು ನಿರ್ಮಾಣವಾದಾಗ, ಆ ನೀರನ್ನು ಬಳಕೆ ಮಾಡತಕ್ಕಂಥವರೂ ಸಹ ಆ ಪ್ರದೇಶಕ್ಕೆ ಸೀಮಿತವಾಗಿರತಕ್ಕಂಥವರು ಆಗಿರುತ್ತಾರೆ. ಆ ರೀತಿ ಇವತ್ತಿನ ದಿವಸ ಎಲ್ಲಾ ನೀರಾವರಿ ಯೋಜನೆಗಳ ಪ್ರಯೋಜನ ಆ ಪ್ರದೇಶಕ್ಕೆ ಮಾತ್ರ ಸೀಮಿತವಾಗಿದೆ. ಆದರೆ ಈ ಯೋಜನೆಗಳನ್ನು ನಿರ್ಮಾಣ ಮಾಡಲು ಇಡೀ ರಾಜ್ಯದ ಹಣ ಯಥೇಚ್ಛವಾಗಿ ಖರ್ಚಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಆ ಯೋಜನೆಗಳ ಪ್ರಯೋಜನ ಒಂದು ಕಡೆಗೆ ಮಾತ್ರ ಕೇಂದ್ರೀಕೃತವಾದಾಗ

ಬೇರೆಯವರಿಗೂ ಸಹ ಅದರ ಪ್ರಯೋಜನ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಆಗಬೇಕಾಗಿರತಕ್ಕಂಥಾದ್ದು ಅತಿ ಅವಶ್ಯಕ. ಆದ್ದರಿಂದ ಸರ್ಕಾರಗಳು ನೀರಿನ ಬಳಕೆದಾರರಿಗೆ ನೀರಾವರಿ ತೆರಿಗೆಯನ್ನೋ, ಮತ್ತೊಂದನ್ನೋ ಅಥವಾ ಮಗದೊಂದನ್ನೋ ಹಾಕತಕ್ಕಂಥಾದ್ದು ಜಾರಿಯಲ್ಲಿದೆ. ಅದರ ಉದ್ದೇಶವೆಂದರೆ, ಯಾರು ಯೋಜನೆಗಳ ಪ್ರಯೋಜನವನ್ನು ಪಡೆಯುತ್ತಾರೆ, ನೀರನ್ನು ಬಳಸಿಕೊಳ್ಳುತ್ತಾರೆ, ಅವರು ಅದಕ್ಕೆ ಪ್ರತ್ಯುತ್ತರವಾಗಿ ಬೇರೆ ಪ್ರದೇಶಗಳಲ್ಲಿರುವವರಿಗೆ ಅನುಕೂಲವಾಗುವಂತೆ ಅವರಿಗೆ ಅದನ್ನು ವಾಪಸ್ಸು ಕೊಡಬೇಕಾಗಿರತಕ್ಕಂಥಾದ್ದು ಅವರ ಜವಾಬ್ದಾರಿ ಎನ್ನುವ ತತ್ವದ ಆಧಾರದ ಮೇಲೆ ಆ ನೀರನ್ನು ಬಳಸಿಕೊಳ್ಳತಕ್ಕಂಥವರು ಸರ್ಕಾರಕ್ಕೆ ತೆರಿಗೆ ಕೊಡಬೇಕಾಗುತ್ತದೆ. ಆದರೆ ದುರಾದೃಷ್ಟವಶಾತ್, ನಮ್ಮ ರಾಜ್ಯದಲ್ಲಿ ಅದು ಕಾವೇರಿ ಕಣಿವೆ ಇರಬಹುದು ಅಥವಾ ಕೃಷ್ಣಾ ಕಣಿವೆ ಇರಬಹುದು, ಇಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಯೋಜನೆಗಳ ಮೂಲಕ ನೀರನ್ನು ಬಳಕೆ ಮಾಡಿಕೊಂಡಿದ್ದಾರೆ, ಅವರಿಂದ ಅದನ್ನು ವಸೂಲಿ ಮಾಡತಕ್ಕಂಥ ಕೆಲಸ ಇಲ್ಲಿಯವರೆಗೂ ಆಗಿಲ್ಲ.

5.20 ಪಿ.ಎಂ.

ನೀರನ್ನು ಬಳಕೆ ಮಾಡಿಕೊಂಡಿರುತ್ತಾರೆ, ನೀರಿನ ಬಿಲ್ ಇಲ್ಲಿಯವರೆಗೆ ಕೂಡ ವಸೂಲು ಆಗಿರುವುದಿಲ್ಲ, ಇದರ ಬಗ್ಗೆ ಮಾನ್ಯ ಮಂತ್ರಿಗಳು ಲೆಕ್ಕವನ್ನು ಕೊಡಬೇಕಾಗುತ್ತದೆ. ವರ್ಷದಲ್ಲಿ ಶೇಕಡ 30-40ರಷ್ಟು ಮಾತ್ರ ನೀರಿನ ಬಿಲ್ ವಸೂಲಾಗುತ್ತದೆ, ಅದಕ್ಕಿಂತ ಹೆಚ್ಚಿಗೆ ವಸೂಲಾಗುತ್ತಿಲ್ಲವೆಂದು ಸಹ ಹೇಳಿರುತ್ತಾರೆ. ಸಹಕಾರ ಸಂಘಗಳನ್ನು ಮಾಡತಕ್ಕಂಥ ಉದ್ದೇಶ ಸಹ, ರೈತರಿಗೆ ನೀರನ್ನು ಸರಬರಾಜು ಮಾಡತಕ್ಕಂಥ ಕಾಲದಲ್ಲಿ ಅವರಿಂದ ವಾಟರ್ ರೇಟನ್ನು ವಸೂಲು ಮಾಡುವುದಕ್ಕೆ ಸುಲಭವಾಗುತ್ತದೆ. ಆದ್ದರಿಂದ ಇದು ಒಂದು ಉದ್ದೇಶ ಎನ್ನತಕ್ಕಂಥದ್ದು ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ಸಹ ಈಗಾಗಲೇ ತಿಳಿಸಿರುತ್ತಾರೆ. ನಾನು ಆ ತತ್ವದ ಕಡೆಗೆ ಹೋಗುತ್ತೇನೆ. ಯಾರು ನೀರಿನ ಪ್ರಯೋಜನವನ್ನು ಪಡೆಯುತ್ತಾರೆ, ಅದರ ಬಿಲನ್ನು ಕೊಡಬೇಕು ಅದನ್ನು ನಾನು ಒಪ್ಪುತ್ತೇನೆ. ಆದರೆ ಆ ವ್ಯವಸ್ಥೆ ಇಲ್ಲಿಯವರೆಗೆ ಸಹ ಆಗಿರುವುದಿಲ್ಲ. ಇಲ್ಲಿಯವರೆಗೆ ಅನೇಕ ಸರ್ಕಾರಗಳು ಬಂದು ಹೋಗಿವೆ, ಆದರೂ ಸಹ ಯಾರು ಪ್ರಯೋಜನವನ್ನು ಪಡೆದಿದ್ದಾರೆ ಅವರಿಂದ ಬರತಕ್ಕಂಥದ್ದನ್ನು ವಸೂಲು ಮಾಡುವುದಕ್ಕೆ ಇಲ್ಲಿಯವರೆಗೆ ತೀವ್ರವಾದ ಪ್ರಯತ್ನಗಳು ನಡೆದಿರುವುದಿಲ್ಲ. ನಾನು ಆಗಲೇ ವಿವರಿಸಿದಂತೆ ಮಳೆ ಆಧಾರಿತ ಪ್ರದೇಶಗಳಲ್ಲಿ ಕುಡಿಯಲು ನೀರು ಇಲ್ಲ. ಇವತ್ತಿನವರೆಗೆ ಕುಡಿಯುವ ನೀರನ್ನು ಒದಗಿಸುವುದಕ್ಕೆ ನಮ್ಮಿಂದ ಸಾಧ್ಯವಾಗಿರುವುದಿಲ್ಲ, ಏಕೆಂದರೆ ಅದಕ್ಕೆ ಹಣದ ಕೊರತೆ ಕೂಡ ಇದೆ, ಹಾಗೂ ನಾನಾ ಕೊರತೆಗಳು ಇವೆ. ನೀರಿನ ಅಂತರ್ಜಲದ ಮಟ್ಟ 600-800ಅಡಿಗಳವರೆಗೆ ಹೋಗಿದ್ದನ್ನು ಸಹ ನಾವು ಕಾಣುತ್ತಿದ್ದೇವೆ. ಕಾರಣವೇನೆಂದರೆ, ನೀರನ್ನು ತೆಗೆಯುವುದು ಕೂಡ ಹೆಚ್ಚಾಗಿದೆ ಇದೊಂದು ಕಾರಣವಾಗಿದೆ. ಮಳೆ ಬರಬೇಕು, ಭೂಮಿಯ ಒಳಗಡೆ ನೀರು ಹೋಗಬೇಕು, ಭೂಮಿ ಆ ನೀರನ್ನು ಹಿಡಿದುಕೊಳ್ಳಬೇಕು, ತೆರೆದ ಬಾವಿ ಅಥವಾ ಕೊಳವೆ ಬಾವಿ ಮೂಲಕ ಆ ನೀರು ಮೇಲಕ್ಕೆ ಬರಬೇಕು. ಅನಂತರ ಆವಿಯಾಗಿ ಆ ನೀರು ಭೂಮಿಗೆ ಹೋಗಬೇಕು, ಇದರಲ್ಲಿ ವ್ಯತ್ಯಾಸವಾಗಿ ರೀಚಾರ್ಜ್ ಡಿಸ್‌ಚಾರ್ಜ್ ಆಗಿ ಇವತ್ತು ಅಂತರ್ಜಲದ ಮಟ್ಟ ಸಹ ಕೆಳಮಟ್ಟಕ್ಕೆ ಹೋಗಿದ್ದನ್ನು ನಾವು ನೋಡುತ್ತಿದ್ದೇವೆ. ಅಂತಹ ಕಡೆ ಇವತ್ತು ವ್ಯವಸಾಯ ಮಾಡುವುದಕ್ಕೆ ಬಹಳ ಕಷ್ಟಕರವಾಗಿದ್ದು, ವ್ಯವಸಾಯ ಲಾಭದಾಯಕವಲ್ಲವೆನ್ನುವ ಪರಿಸ್ಥಿತಿ

ಇವತ್ತು ನಮ್ಮ ರಾಜ್ಯದಲ್ಲಿ ಉಂಟಾಗಿದೆ. ನಾನು ಹೇಳಿದ ಹಾಗೆ ಕನಿಷ್ಠ 50-55 ಶೇಕಡಾ ಭಾಗ, ಇರತಕ್ಕಂಥ ಎಲ್ಲ ಅವಕಾಶಗಳನ್ನು ನಾವು ಉಪಯೋಗಿಸಿಕೊಂಡು ಕೂಡ, ಇಷ್ಟು ವಿಸ್ತಾರವಾದ ಭೂಮಿ ಮಳೆಯಾಧಾರಿತ ವ್ಯವಸಾಯದ ಭೂಮಿಯಾಗಿಯೇ ಉಳಿಯುತ್ತದೆ. ಅಂತಹ ಕಡೆ ಪ್ರಯೋಜನವನ್ನು ಹೊಂದಬೇಕಾದರೆ, ಯಾರು ನೀರನ್ನು ಉಪಯೋಗಿಸಿರುತ್ತಾರೆ ಅವರು ಬಿಲನ್ನು ಕೊಡತಕ್ಕಂಥದ್ದು ಈ ದೃಷ್ಟಿಯಿಂದ ಅತಿ ಮುಖ್ಯ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ಈ ಬಿಲ್‌ನಲ್ಲಿ ಬಹಳ ಮುಖ್ಯವಾಗಿರುವುದು, ಈ ನೀರಿನ ಬಳಕೆ ವೈಜ್ಞಾನಿಕವಾಗಿರಬೇಕು. ಭತ್ತ ಮತ್ತು ಕಬ್ಬು ಹೆಚ್ಚಿಗೆ ನೀರನ್ನು ಬಳಕೆ ಮಾಡಿಕೊಳ್ಳುತ್ತವೆ, ನಾನು ಅದರ ಲೆಕ್ಕವನ್ನು ತಂದಿರುವುದಿಲ್ಲ. ಪಂಜಾಬ್ ರಾಜ್ಯದಲ್ಲಿ ಭತ್ತವನ್ನು ಬೆಳೆದಿದ್ದಾರೆ, ಅಷ್ಟೆ ನೀರಿನ ಪ್ರಮಾಣದಲ್ಲಿ 3-4 ಎಕರೆಯಲ್ಲಿ ಬೇರೆ ಬೆಳೆಯನ್ನು ಬೆಳೆಯಲು ಸಾಧ್ಯವಿದೆ. ರೈತರಲ್ಲಿ ಒಂದು ಭಾವನೆ ಏನು ಬಂದಿದೆ ಎಂದರೆ, ಬೆಳೆದರೆ ಭತ್ತವನ್ನು ಬೆಳೆಯಬೇಕು ಅಥವಾ ಬರೀ ಕಬ್ಬು ಬೆಳೆಯಬೇಕು ಎನ್ನುವುದು ರೈತರ ತಲೆಯಲ್ಲಿ ಸೇರಿದೆ, ಈ ಮನೋಭಾವನೆ ಬದಲಾವಣೆಯಾಗಬೇಕು. ನಾನು ಇಸ್ರೇಲ್ ದೇಶಕ್ಕೆ ಎರಡು ಸಲ ಹೋಗಿ ಬಂದಿದ್ದೇನೆ, ಅಲ್ಲಿ ಪ್ರತಿಯೊಂದನ್ನು ಕೂಡ ಲೆಕ್ಕ ಹಾಕುತ್ತಾರೆ. ನೀವು ಏನೇನು ಬೆಳೆಯನ್ನು ಬೆಳೆಯುತ್ತಿರೆಂದು ಕೇಳಿದೆ, ಮೊದಲು ಅವರು ಗೋಧಿ ಹಾಗೂ ಬೇರೆ ಬೇರೆ ಬೆಳೆಗಳನ್ನು ಬೆಳೆಯುತ್ತಿದ್ದರು. ಎರಡನೆಯ ಸಲ ನಾನು ಹೋದಾಗ ಅವರನ್ನು ಕೇಳಿದೆ, ಬದಲಾವಣೆ ಕಾಣುತ್ತಿದೆ ಅಲ್ಲ ಏಕೆ ಎಂದಾಗ, ಹತ್ತಿಯನ್ನು ಬೆಳೆಯಬೇಕಾದರೆ ಹೆಚ್ಚು ನೀರು ಬೇಕು, ಗೋಧಿಗೆ ಹೆಚ್ಚು ನೀರು ಬೇಕಾಗುತ್ತದೆ. ಯಾವ ಬೆಳೆ ಹೆಚ್ಚು ನೀರು ಕೇಳುತ್ತದೆ, ಆ ಬೆಳೆಯನ್ನು ನಾವು ಇನ್ನು ಮುಂದೆ ಬೆಳೆಯುವುದಿಲ್ಲ ಎನ್ನುವ ತೀರ್ಮಾನಕ್ಕೆ ಅವರು ಬಂದಿದ್ದಾರೆ. ವೈಜ್ಞಾನಿಕವಾಗಿ ಅವರು ಬೆಳೆಯನ್ನು ಬೆಳೆಯುವ ಪದ್ಧತಿಯನ್ನು ಬಳಕೆ ಮಾಡಿಕೊಂಡಿರುವುದಿಲ್ಲದೆ, ನೀರನ್ನು ಬಳಕೆ ಮಾಡಿಕೊಳ್ಳುವ ವಿಧಾನವನ್ನು ಬದಲಾಯಿಸಿಕೊಂಡಿದ್ದಾರೆ. ಅಲ್ಟ್ರಾ ಲೋ ಸ್ಪ್ರಿಂಕ್ಲರ್ ವಿಧಾನವನ್ನು ಬಳಸಿಕೊಂಡು, ಅದರಿಂದ ಪ್ರತಿಯೊಂದನ್ನು ಕೂಡ ಅವರು ಕರಾರುವಕ್ಕಾಗಿ ಯಾವ ಬೆಳೆಗೆ ಎಷ್ಟು ನೀರು ಕೊಡಬಹುದು ಎನ್ನುವ ಬಗ್ಗೆ ಲೆಕ್ಕವನ್ನು ಹಾಕಿ ಇಡುತ್ತಿದ್ದರು. ಎರಡನೇ ಸಲ ನಾನು ಅಲ್ಲಿಗೆ ಹೋದಾಗ ಪರಿಸ್ಥಿತಿ ಪೂರ್ತಿಯಾಗಿ ಬದಲಾವಣೆಯಾಗಿತ್ತು. ಅಲ್ಟ್ರಾ ಲೋ ವಿಧಾನ ಹೋಗಿ ಪಲ್ಸ್ ಇರಿಗೇಶನ್ ವಿಧಾನ ತಂದಿದ್ದಾರೆ. ನಾನು ಆಗ ಅವರನ್ನು ಅದಕ್ಕೆ ಇದಕ್ಕೆ ಏನು ವ್ಯತ್ಯಾಸವೆಂದು ಕೇಳಿದಾಗ, ಒಂದು ಗಿಡಕ್ಕೆ ಎಷ್ಟು ನೀರು ಬೇಕು, ಒಂದು ತೊಟ್ಟು ಕೂಡ ಹೆಚ್ಚಿಗೆ ಹೋಗದಂತೆ ವ್ಯವಸ್ಥಿತವಾದ ವೈಜ್ಞಾನಿಕ ರೀತಿಯಲ್ಲಿ ಆ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಅಭಿವೃದ್ಧಿಪಡಿಸಿ ಆ ನೀರನ್ನು ಸದ್ಬಳಕೆ ಮಾಡಿಕೊಳ್ಳುತ್ತಿರುವುದನ್ನು ಕೂಡ ನಾನು ನೋಡಿ ಬಂದಿರುತ್ತೇನೆ. ನಮ್ಮಲ್ಲಿ ಎಷ್ಟು ಅಗಾಧವಾದ ಪ್ರಮಾಣದಲ್ಲಿ ಇವತ್ತು ನೀರು ಹಾಳಾಗುತ್ತದೆಂದರೆ, ಬೆಂಗಳೂರು ಮಹಾನಗರದಲ್ಲಿ ಕೊಳಚೆ ನೀರನ್ನು ನಾವು ಹೊರಗಡೆ ಬಿಡುತ್ತೇವೆ, ಇದರಿಂದ ವಾತಾವರಣ ಕೆಡುತ್ತದೆ, ಜನರ ಆರೋಗ್ಯ ಕುಲಗೆಡುತ್ತದೆ. ಇಸ್ರೇಲ್ ದೇಶದಲ್ಲಿ ಮಳೆ ನೀರು ಅಥವಾ ಬಳಸಿದ ನೀರನ್ನು ಅವರು ಹಾಳಾಗುವುದಕ್ಕೆ ಬಿಡುವುದಿಲ್ಲ. ಆ ನೀರನ್ನು ಶುದ್ಧೀಕರಿಸಿ ಎರಡು ಕೊಳವೆಗಳ ಮೂಲಕ ಬಿಡುವುದಕ್ಕೆ ಪೈಪಿನ ಜಾಲವನ್ನು ಮಾಡಿದ್ದಾರೆ. ಇಸ್ರೇಲ್ ದೇಶದ ಜೋಡಾನ ನದಿಯಿಂದ, ಅದಕ್ಕೆ ಅವರು ಸಮುದ್ರವೆಂದು ಕರೆಯುತ್ತಾರೆ. ಆ ಸಮುದ್ರದಿಂದ ಅವರು

500 ಅಡಿ ಪಂಪ್ ಮಾಡಿ, ವ್ಯವಸಾಯಕ್ಕೆ ಆ ನೀರನ್ನು ಕೊಡುತ್ತಾರೆ. ರೈತನ ಜಮೀನವರೆಗೆ ನೀರನ್ನು ತಂದು ಅಲ್ಲಿ ಒಂದು ಮೀಟರ್ ಇಟ್ಟಿರುತ್ತಾರೆ. ಎಷ್ಟು ನೀರನ್ನು ಉಪಯೋಗ ಮಾಡುತ್ತೀರೋ ಅದಕ್ಕೆ ಸರ್ಕಾರಕ್ಕೆ ಶುಲ್ಕವನ್ನು ಕೊಡಬೇಕು ಎನ್ನುವ ನಿಬಂಧನೆಯನ್ನು ಮಾಡಿದ್ದಾರೆ. ಸ್ವಾಭಾವಿಕವಾಗಿ ದೊರೆಯತಕ್ಕಂಥ ನೀರಿಗಲ್ಲದೆ ಬಳಕೆ ಮಾಡಿದಂಥ ನೀರನ್ನು ಸಹ ಶುದ್ಧೀಕರಣ ಮಾಡುತ್ತಾರೆ. ಅದನ್ನು ಕೂಡ ಒಂದು ಕೊಳವೆ ಮೂಲಕ ಬೇರೆ ಬೇರೆ ಬಣ್ಣವನ್ನು ಹಾಕಿ ರೈತರ ಜಮೀನಿನವರೆಗೆ ಬಿಡುತ್ತಾರೆ. ನಮ್ಮ ರಾಜ್ಯದಲ್ಲಿ ರೈತರ ಜಮೀನಿನ ವಿದ್ಯುತ್ ಮೀಟರ್‌ವರೆಗೆ ವಿದ್ಯುತನ್ನು ನಾವು ಹೇಗೆ ಸರಬರಾಜು ಮಾಡುತ್ತೇವೆಯೋ ಅದೇ ರೀತಿಯಾಗಿ ಇಸ್ರೇಲ್ ದೇಶದಲ್ಲಿ ರೈತರ ಜಮೀನಿನವರೆಗೆ ನೀರನ್ನು ಸರಬರಾಜು ಮಾಡತಕ್ಕಂಥದ್ದನ್ನು ನಾವು ನೋಡಿದ್ದೇವೆ. ಆ ರೀತಿಯಾದಂಥ ಹೊಸ ಆಲೋಚನೆ ಈ ಬಿಲ್‌ನಲ್ಲಿ ಇಲ್ಲವೇ ಇಲ್ಲ. ಇದರಲ್ಲಿ ವೈಜ್ಞಾನಿಕವಾಗಿ ಆಲೋಚನೆ ಮಾಡುವುದು ಇಲ್ಲವೇ ಇಲ್ಲ. ಓಬಿರಾಯನ ಕಾಲದಲ್ಲಿರುವ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗುತ್ತೇವೆ. ಯಾರು ನೀರನ್ನು ಬಳಕೆ ಮಾಡಿಕೊಳ್ಳುತ್ತಾರೆ, ಆ ಬಳಕೆದಾರನಿಂದ ಸರ್ಕಾರಕ್ಕೆ ವಾಟರ್ ರೇಟನ್ನು ವಸೂಲು ಮಾಡುವುದಕ್ಕಾಗುವುದಿಲ್ಲ. ವಸೂಲು ಮಾಡುವುದಕ್ಕೆ ಈ ಸಹಕಾರ ಸಂಘ ಒಂದು ಸಾಧನವಾಗುತ್ತದೆಂದು ಈ ಮಸೂದೆಯನ್ನು ತಂದಿರುತ್ತೀರಿ, ಇದಕ್ಕಿಂತ ಹೆಚ್ಚಾಗಿ ವೈಜ್ಞಾನಿಕವಾದ ರೀತಿಯಲ್ಲಿ ನೀರಿನ ಬಳಕೆಯಾಗಬೇಕು. ಪ್ರತಿಯೊಂದು ಹಂತದಲ್ಲಿ ಕೂಡ ನೀರಿನ ಸದ್ಬಳಕೆಯಾಗತಕ್ಕಂಥದ್ದಕ್ಕೆ ಚಿಂತನೆಯನ್ನು ಇಲ್ಲಿ ಮಾಡಿಲ್ಲವೆಂದು ನಾನು ಬಹಳ ದುಃಖದಿಂದ ಒಬ್ಬ ವ್ಯವಸಾಯಗಾರನಾಗಿ ಈ ಮಾತನ್ನು ಹೇಳಬೇಕಾಗಿದೆ. ನನ್ನ ಆಲೋಚನೆ ಪ್ರಕಾರ ಇವತ್ತು ದೊಡ್ಡ ದೊಡ್ಡ ಯೋಜನೆಗಳನ್ನು ಕಟ್ಟಬೇಕಾಗಿಲ್ಲ, ನಮ್ಮ ರಾಜ್ಯದಲ್ಲಿರುವ ಎಲ್ಲ ಅಚ್ಚುಕಟ್ಟುಗಳನ್ನು ನಾನು ಹೋಗಿ ನೋಡಿ ಬಂದಿದ್ದೇನೆ.

ಉಪಾಧ್ಯಕ್ಷರು : ತಾವು ಸ್ವಲ್ಪ ಇದನ್ನು ಶಾರ್ಟ್ ಮಾಡಿ ಮಾತನಾಡಬೇಕು.

ಶ್ರೀ ಸಿ. ಬೈರೇಗೌಡ : ತಾವು ನನಗೆ ಮಾತನಾಡುವುದು ಬೇಡವೆಂದರೆ ಕುಳಿತುಕೊಳ್ಳುತ್ತೇನೆ. ನಾವು ಬೇರೆ ಬೇರೆ ದೇಶಗಳಿಗೆ ಹೋಗಿ ಬಂದಿದ್ದೇವೆ, ಯಾವ ದೇಶದಲ್ಲಿ ಏನು ಮಾಡಿದ್ದಾರೆಂದು ನೋಡಿ ಬಂದಿದ್ದೇವೆ, ನಾವು ಹೋಗಿ ಬರುವುದಕ್ಕೆ ಸಾರ್ವಜನಿಕರ ಹಣ ಕೂಡ ಖರ್ಚಾಗಿರುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರುಗಳಿಗೆ ಏನಾದರೂ ಅರ್ಜೆಂಟ್ ಕೆಲಸವಿದ್ದರೆ ಇದನ್ನು ನಾಳೆ ಚರ್ಚೆ ಮಾಡೋಣ, ಏಕೆಂದರೆ ಇದು ಬಹಳ ಅವಶ್ಯಕವಾಗಿರುವುದರಿಂದ ಇದರ ಬಗ್ಗೆ ಬಹಳ ಚರ್ಚೆಯಾಗಬೇಕು. ಇದರ ಬಗ್ಗೆ ನಾನು ಮಾತನಾಡಬೇಕು. ಇನ್ನು ಹಲವಾರು ಸದಸ್ಯರುಗಳು ಮಾತನಾಡುವವರಿದ್ದಾರೆ. ಬೇಕಾದರೆ ರಾತ್ರಿ 7-8ರವರೆಗೆ ಕಲಾಪವನ್ನು ಮುಂದುವರೆಸೋಣ. ಇದರ ಬಗ್ಗೆ ಮಾನ್ಯ ನೀರಾವರಿ ಸಚಿವರು ಉತ್ತರವನ್ನು ಕೊಡುವುದಕ್ಕೆ ತಯಾರಾಗಿದ್ದಾರೆ.

ಉಪಾಧ್ಯಕ್ಷರು : ಮಾನ್ಯ ಬೈರೇಗೌಡರೆ, ತಾವು ಮಾತನಾಡಬಹುದು.

ಶ್ರೀ ಸಿ. ಬೈರೇಗೌಡ : ನಾನು ಎಲ್ಲಾ ಅಚ್ಚುಕಟ್ಟುಗಳಿಗೂ ಹೋಗಿ ನೋಡಿ ಬಂದಿರುತ್ತೇನೆ. ಅಲ್ಲಿ ಅಷ್ಟೊಂದು ನೀರು ಹರಿದು ಹೋಗುತ್ತಿರುವುದನ್ನು ನನ್ನ ಕಣ್ಣಲ್ಲಿ ನೋಡಲಿಕ್ಕೆ ಆಗಲಿಲ್ಲ. ನನ್ನ

ಅನುಭವದಲ್ಲಿ ಹೇಳುವುದಾದರೆ ನಾನು ಮಾರ್ಚ್ ತಿಂಗಳಲ್ಲಿ ಒಂದು ಸಾರಿ ಗುಲ್ಬರ್ಗಾ ಜಿಲ್ಲೆಗೆ ಪ್ರವಾಸ ಹೋದಾಗ, ಅಲ್ಲಿ ಒಂದು ಸಣ್ಣ ತೊರೆ ಹರಿಯುತ್ತಿತ್ತು ನನ್ನ ಕಾರು ಮುಂದಕ್ಕೆ ಹೋಗುವುದಕ್ಕೆ ಆಗಲಿಲ್ಲ, ತಕ್ಷಣ ನಾನು ಕಾರಿಂದ ಇಳಿದು ತೊರೆಯನ್ನು ದಾಟಿ ಮುಂದಕ್ಕೆ ಹೋಗಬೇಕಾದ ಪ್ರಸಂಗ ಬಂತು. ಆಗ ನಾನು ಅಲ್ಲಿಗೆ ದನಗಳ ಜಾತ್ರೆಯಿತ್ತು ಆ ಕಾರ್ಯಕ್ರಮಕ್ಕೆ ನಾನು ಹೋಗಿದ್ದೆ ಆಗ ಅಲ್ಲಿದ್ದ ನನ್ನ ಸ್ನೇಹಿತರನ್ನು ಈ ಬಗ್ಗೆ "ಮಳೆಯಿಲ್ಲ ಆದರೂ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನೀರು ಇಲ್ಲಿ ಹರಿಯುತ್ತದೆ ಇದು ಎಲ್ಲಿಂದ ಬರುತ್ತದೆ" ಎಂದು ಕೇಳಿದೆ. ಆಗ ಅವರು "ಇದೆಲ್ಲ ವೇಸ್ಟ್ ನೀರು" ಎಂದು ಹೇಳಿದರು. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಪ್ರವಾಹದ ರೀತಿಯಲ್ಲಿ ನೀರು ಹರಿದುಕೊಂಡು ಹೋಗುತ್ತಿದೆ, ಇದಕ್ಕೆ ಇಲ್ಲಿ ಏನಾದರೂ ಪರಿಹಾರ ಇದೆಯೇ ಎಂದು ಹುಡುಕಿದರೆ ಇಲ್ಲಿ ಏನೂ ಇಲ್ಲ? ನಾನು ಈ ಬಗ್ಗೆ ಮಂಡ್ಯದಲ್ಲಿ ಹೋಗಿ ವಿಚಾರಿಸಿದಾಗ, "ಏನ್ರಿ ನೀವು ಇಷ್ಟೊಂದು ನೀರನ್ನು ಬಳಸುತ್ತೀರಿ ಒಂದು ಎಕರೆಗೆ ಬಳಸುವ ನೀರನ್ನು ನಮ್ಮ ಕಡೆಗೆ ನಾಲ್ಕು ಎಕರೆಗೆ ನೀರು ಬಳಸಬಹುದು" ಎಂದು ಹೇಳಿದೆ. ಅಲ್ಲಿದ್ದ ರೈತರು ನನ್ನ ಮೇಲೆ ಕೋಪಿಸಿಕೊಂಡು "ಏನ್ರಿ ನೀವು ಕುಡಿಯುವ ನೀರಿಗೆ ಬರ ಇರುವ ಪ್ರದೇಶದಿಂದ ಬಂದಿದ್ದೀರಿ, ನಮಗೆ ನೀರಿನ ಪಾಠ ಹೇಳಿ ಕೊಡಲು ಬರುತ್ತೀರಾ" ಎಂದು ಹೇಳಿದರು. ಆಗ ನಾವು ಪ್ರಪಂಚದಲ್ಲಿ ನೀರನ್ನು ಯಾವ್ಯಾವ ರೀತಿಯಲ್ಲಿ ಬಳಸುತ್ತಾರೆ ಎಂಬುದನ್ನು ಆ ಪ್ರಸಂಗದಲ್ಲಿ ಹೇಳಬೇಕಾಯಿತು. ಇವತ್ತು ಏನಾಗಿದೆ ಎಂದರೆ, ಗದ್ದೆಯಲ್ಲಿ ಭತ್ತದ ಬೆಳೆಗೆ ಅರ್ಧ ಅಂಗುಲ ನೀರು ನಿಲ್ಲಿಸಿದರೆ ಸಾಕು ಆದರೆ ಕೆಲವು ಕಡೆ ಎರಡು, ಮೂರು ಅಂಗುಲ ನೀರು ನಿಲ್ಲಿಸುವ ಸಂಪ್ರದಾಯವಿದೆ. ರೈತರ ಭಾವನೆಗಳು ಕೂಡ ಇಂದು ಬದಲಾಗಬೇಕಾಗಿದೆ. ಯಾವ್ಯಾವ ಬೆಳೆಗೆ ಎಷ್ಟು ನೀರು ಬೇಕು ಎನ್ನುವ ಬಗ್ಗೆ ಅವರಿಗೂ ಮಾಹಿತಿ ಇರಬೇಕಾಗುತ್ತದೆ. ಈ ಬಗ್ಗೆ ನಿಮ್ಮ ಇಲಾಖೆಯ ಅಭಿಯಂತರರು, ವಿಶ್ವವಿದ್ಯಾನಿಲಯದವರು ಲೆಕ್ಕ ಹಾಕಿಕೊಂಡು ಇಟ್ಟುಕೊಂಡಿದ್ದಾರೆ. ಆದರೆ, ಈ ಲೆಕ್ಕ ಕೇವಲ ನಿಮ್ಮ ಪುಸ್ತಕದಲ್ಲಿ ಇದೆಯೇ ಹೊರತು ಅದೇ ಪ್ರಕಾರ ರೈತರ ಜಮೀನಲ್ಲಿ ನೀರು ನಿಲ್ಲುವುದನ್ನು ನಾವು ಕಾಣುತ್ತಿಲ್ಲ. ಅಚ್ಚುಕಟ್ಟು ಪ್ರದೇಶಗಳಲ್ಲಿ ಈ ಕೆಲಸವಾಗುತ್ತಿಲ್ಲ. ಈ ಕೆಲಸದ ಬಗ್ಗೆ ರೈತರಿಗೆ ತಿಳುವಳಿಕೆ ಹೇಳಿ, ಈ ಆಧುನಿಕ ವಿಧಾನಗಳನ್ನು ಅನುಸರಿಸಿ, ನೀರಿನ ಮಿತವ್ಯಯ ಸಾಧಿಸಬೇಕು ಎನ್ನುವ ಪ್ರಕಾರ ಕೂಡ ನಡೆಯುತ್ತಿಲ್ಲ ನಾನು ಈ ಮಾತನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಏಕೆಂದರೆ, ನೀರು ರೈತರಿಗೆ ಅತಿ ಮುಖ್ಯವಾಗಿ ಬೇಕಾಗಿರುವ ಅಂಶವಾಗಿರುವುದರಿಂದ ಇದನ್ನು ಸದ್ಬಳಕೆ ಮಾಡಬೇಕಾಗುತ್ತದೆ. ಮತ್ತೊಂದು ಕಡೆ ಏನಾಗುತ್ತದೆ, ದೊಡ್ಡ ದೊಡ್ಡ ಯೋಜನೆಗಳಲ್ಲಿ ಕಾಲುವೆಗಳು ಇವೆ, ಸೀಳು ಕಾಲುವೆಗಳು ಇವೆ, ಇಂಥ ಕಡೆ ತುದಿಗೆ ಬರುವ ರೈತರಿಗೆ ನೀರೇ ಸಿಕ್ಕುತ್ತಿಲ್ಲ. ಆಗ ಅಲ್ಲಿ ಜಗಳಗಳು ಉಂಟಾಗುತ್ತವೆ. ಉದಾಹರಣೆಗೆ, ಮಂಡ್ಯ ಜಿಲ್ಲೆಯ ಬಗ್ಗೆ ಹೇಳುವುದಾದರೆ ಮಳವಳ್ಳಿ ತಾಲ್ಲೂಕಿಗೆ ನೀರು ಹೋಗಬೇಕಾದರೆ ಒಂದೂವರೆ ತಿಂಗಳು ಕಾಯಬೇಕಾಗುತ್ತದೆ, ಕೆಲವು ಸಂದರ್ಭಗಳಲ್ಲಿ ಅಲ್ಲಿ ನೀರು ಹೋಗದೆ ಏನೂ ಬೆಳೆಗಳನ್ನು ಬೆಳೆಯದಿರುವ ಧಾರುಣ ಪರಿಸ್ಥಿತಿ ಬರುತ್ತದೆ. ಹೇಮಾವತಿಯಲ್ಲಿ ನೀವು ಸೆಮಿ ಡ್ರೈ ಕ್ರಾಪ್‌ಗೆ ಡಿಸೈನ್ ಮಾಡಿದ್ದೀರಿ, ಆದರೆ ಅಲ್ಲಿ ಇದರ ಪ್ರಕಾರ ಹೋಗದೇ ಭತ್ತ, ಕಬ್ಬು ಬೆಳೆಯುತ್ತಿದ್ದಾರೆ. ಈ ರೀತಿಯಾದರೆ ಹೇಗೆ? ಅಲ್ಲಿ ರಾಗಿ, ಕಡಲೆಕಾಯಿ, ಮುಂತಾದ ಬೆಳೆಗಳನ್ನು ಬೆಳೆಯಬೇಕು ಎನ್ನುವ ಕಡೆ ಈ ರೀತಿ ಭತ್ತ, ಕಬ್ಬು ಬೆಳೆದು ನೀರನ್ನು ದುರ್ಬಳಕೆ

ಮಾಡಿಕೊಂಡರೆ ಹೇಗೆ? ಚನ್ನರಾಯಪಟ್ಟಣದಿಂದಾಚೆಗೆ ಮಾತ್ರ ನೀರು ಇರಬೇಕು ಈ ಕಡೆ ನೀರು ಬರುವ ಹಾಗಿಲ್ಲ. ಕೆಳಗಡೆ ನೀರು ಬರುವ ಪರಿಸ್ಥಿತಿಯಿಲ್ಲ. ಎಲ್ಲಾ ನೀರು ಮೇಲಿನ ಹಂಚಿನವರು ಉಪಯೋಗಿಸಿಕೊಂಡು ಬೆಳೆಯುತ್ತಾರೆ.

ಶ್ರೀ ಕೆ.ಹೆಚ್. ರಂಗನಾಥ್ : ತಾವು ಕೃಷಿ ಸಚಿವರಾಗಿದ್ದಾಗ ಎಲ್ಲೆಲ್ಲಿ ಏನೇನು ಬೆಳೆಯಬೇಕು ಎಂಬುದನ್ನು ನಿರ್ಧರಿಸಲಿಲ್ಲ. ಅದರ ಹಿಂದೆಯೂ ಕೂಡ ಈ ರೀತಿ ಮಾಡಿಲ್ಲ, ನೀರು ಕುಡಿದಾದ ಮೇಲೆ ಮಾತನಾಡುತ್ತಾರೆಯೇ? ಕ್ರಾಪಿಂಗ್ ಪ್ಯಾಟರ್ನ್ ಫಿಕ್ಸ್ ಆಗದೇ ಇರುವುದರಿಂದ ಕೃಷಿ ಇಲಖೆಯವರು ಕೂಡ ಇವತ್ತು ಅಲ್ಲಿಗೆ ಹೋಗಿ ನೋಡುವುದಿಲ್ಲ. ನೀರಾವರಿ ಪ್ರದೇಶದಲ್ಲಿ 400 ವ್ಯವಸಾಯ ಕುಟುಂಬಗಳಿಗೆ ಒಬ್ಬ ಗ್ರಾಮ ಸೇವಕ ಇದ್ದಾನೆ. ಖುಷ್ಕಿ ಪ್ರದೇಶದಲ್ಲಿ 800 ವ್ಯವಸಾಯ ಕುಟುಂಬಗಳಿಗೆ ಒಬ್ಬ ಗ್ರಾಮ ಸೇವಕ ಇದ್ದಾನೆ. ಇವರು ಏನು ಮಾಡಬೇಕು, ಯಾವುದನ್ನು ಮಾಡಬೇಕು ಯಾವುದನ್ನು ಬೆಳೆಯಬೇಕು, ಎಂದು ಯಾರು ಹೇಳುವುದಿಲ್ಲ. ಅವರು ಏನು ಹೇಳುತ್ತಾರೆಂದರೆ ಸಬ್ಸಿಡಿ, ಗೊಬ್ಬರ, ಪೆಸ್ಟಿಸೈಡ್ ನಮ್ಮದು ಮತ್ತು ನಿಮ್ಮದು ಚುನಾವಣೆಯ ಬಗ್ಗೆ ಮಾತ್ರ ಹೇಳುತ್ತಾರೆ. ನಮ್ಮ ಚುನಾವಣೆ ಮಾಡಿದನೆಂದು ನಾವು ವರ್ಗ ಮಾಡಿಸುತ್ತೇವೆ, ನಿಮ್ಮದು ಚುನಾವಣೆ ಮಾಡಿದನೆಂದು ನೀವು ವರ್ಗ ಮಾಡಿಸುತ್ತೀರಿ. ಹೀಗಾಗಿ ಅಲ್ಲಿ ಅವರು ಏನೂ ಹೇಳುವುದಿಲ್ಲ. ಈಗ ತಾನೇ ನೀವು ಅರ್ಧ ಇಂಚು ನೀರು ನಿಂತರೆ ಗದ್ದೆಗೆ ಸಾಕು ಎಂದು ತಜ್ಞರು ಹೇಳುತ್ತಾರೆಂದು ಹೇಳಿದಿರಿ, ಆದರೆ ಅದನ್ನು ನಿಲ್ಲಿಸುವವರು ಯಾರು? ಇಂಥ ಕಾಲುವೆಗೆ ಡಿಸೈನ್ ಎಲ್ಲಿ ಆಗಿದೆ? ಸೀಳು ಕಾಲುವೆ ಎಲ್ಲಿ ಡಿಸೈನ್ ಆಗಿದೆ? ಈ ಎಲ್ಲವು ಆಗಿಲ್ಲದಿದ್ದರೆ ನಾವು ಇಲ್ಲಿ ಭಾಷಣ ಮಾಡಿದರೆ ಏನು ಪ್ರಯೋಜನ? ಭೂಮಿ ಏನಾದರೂ ನನ್ನ ಹಾಗೂ ನಿಮ್ಮ ಭಾಷಣವನ್ನು ಕೇಳುತ್ತದೆಯೇ? ತಾವು ಐದು ವರ್ಷದ ಅವಧಿಯಲ್ಲಿ ಇದನ್ನು ಮಾಡಿಸಲಿಲ್ಲ, ಅವರು ಬಂದು ಒಂದು ವರ್ಷವಾಗಿದೆ ನೀವು ಏನೇನು ಮಾಡಿದಿರಿ ಎಂದು ಅವರು ನೋಡಿಕೊಳ್ಳುತ್ತಿದ್ದಾರೆ. ನಾವು ನೀವು ಎಲ್ಲರೂ ಕೂಡ ಇವತ್ತು ನೀರಿನ ಬಗ್ಗೆ ಆಲೋಚಿಸಬೇಕಾಗಿದೆ. ಪಂಜಾಬ್, ಹರಿಯಣ, ಯುಪಿ, ಸಾಕಷ್ಟು ಭತ್ತ ಬೆಳೆಯುವ ಪ್ರದೇಶಗಳಾಗಿವೆ. ಇದರ ಜೊತೆಗೆ ಸರ್ಪ್ಲಸ್ ಏರಿಯಾ ಆಗಿರುವ ಆಂಧ್ರ ಪ್ರದೇಶದಲ್ಲಿ ಭತ್ತ ಇದೆ, ಮಾಮೂಲು ರೀತಿಯಲ್ಲಿ ಸರ್ಪ್ಲಸ್ ಅಲ್ಲದಿದ್ದರೂ ಅವರಿಗೆ ಸಾಕಾಗುವಷ್ಟು ರೀತಿಯಲ್ಲಿ ಭತ್ತ ಬೆಳೆಯುವ ತಮಿಳುನಾಡು ಇದೆ. ನಮ್ಮದೂ ಕೆಲವು ಭಾಗ ಇದೆ. ಇಂಥ ಪರಿಸ್ಥಿತಿಯಿರುವಾಗ ನಾವು ಇನ್ನೂ ಭತ್ತ ಬೆಳೆಯಬೇಕೆ? ಭತ್ತ ಬೆಳೆಯುವುದಕ್ಕೆ ನಾವು ಇನ್ನೂ ಪ್ರೋತ್ಸಾಹಿಸಬೇಕೆ? ಇದರ ಬಗ್ಗೆ ಏನಾದರೂ ಮರುಚಿಂತನೆ ಮಾಡಿದ್ದೀರಾ? ಕೃಷಿ ವಿಶ್ವವಿದ್ಯಾನಿಲಯ ಇದರ ಬಗ್ಗೆ ಯೋಚಿಸುವುದಿಲ್ಲ. ಗ್ರಾಮ ಮಟ್ಟಕ್ಕೆ ತೆಗೆದುಕೊಂಡು ಹೋಗುವಂಥ ಇಲಾಖೆಯೂ ಇದರ ಬಗ್ಗೆ ಏನೂ ಹೇಳುವುದಿಲ್ಲ. ಹೀಗಾಗಿ ನಾವು ಇವತ್ತು ಈ ಪರಿಸ್ಥಿತಿಗೆ ಒಳಗಾಗಿದ್ದೇವೆ.

ಶ್ರೀ ಸಿ. ಬೈರೇಗೌಡ : ಮಾನ್ಯ ರಂಗನಾಥ್‌ರವರು ಹೇಳಿದ್ದು ಅಕ್ಷರಸಃ ಸತ್ಯ. ಅವರು ಈ ವಿಚಾರ ಪ್ರಸ್ತಾಪಿಸಿದ್ದರಿಂದ ಒಂದು ನಡೆದ ಘಟನೆಯನ್ನು ನಾನು ಹೇಳುತ್ತೇನೆ. ನಾನು ಹಳ್ಳಿಗಳಲ್ಲಿ ಪ್ರವಾಸ ಕೈಗೊಂಡಾಗ ನನ್ನ ಜೊತೆಗೆ ಎಲ್ಲಾ ಅಧಿಕಾರಿಗಳನ್ನು ಕರೆದುಕೊಂಡು ಹೋಗುತ್ತಿದೆ. ನಾನು ಅನೇಕ ಹಳ್ಳಿಗಳಲ್ಲಿ ಕರೆದುಕೊಂಡು ಹೋಗಿರುವ ಅಧಿಕಾರಿಗಳನ್ನು ಸಾಲಾಗಿ ನಿಲ್ಲಿಸಿ ಅಲ್ಲಿದ್ದ ರೈತರನ್ನು

ಇವರ ಪರಿಚಯ ನಿಮಗೆ ಇದೆಯೇ? ಇವರು ಯಾರು ಗೊತ್ತೆ? ಎಂದು ಪ್ರಶ್ನಿಸುತ್ತಿದ್ದೆ. ಬಹುತೇಕ ಎಲ್ಲಾ ಹಳ್ಳಿಗಳಲ್ಲಿ ನಮಗೆ ಗೊತ್ತಿಲ್ಲ ಎನ್ನುವ ಉತ್ತರ ಬಂತು. ಆದರೆ, ಬಿಜಾಪುರ ಜಿಲ್ಲೆಯ ಒಂದು ಹಳ್ಳಿಯಲ್ಲಿ ಮಾತ್ರ ಒಬ್ಬ ರೈತ ಇವರು ನಮಗೆ ಗೊತ್ತು, ಎಂದು ಹೇಳಿದ. ಆಗ ನಾನು ಪರವಾಗಿಲ್ಲ ಇವರು ಬಹಳ ಶ್ರದ್ಧೆಯಿಂದ ಕೆಲಸ ಮಾಡಿದ್ದಾನೆಂದುಕೊಂಡು ಅವರು ಯಾರು ಹೇಳು ನೋಡೋಣ ಎಂದು ಅವನನ್ನು ಕೇಳಿದೆ. ಆಗ ಅವನು "ಅದೇ ಸ್ವಾಮಿ ಸಬ್ಸಿಡಿ ಕೊಡುತ್ತೇವೆಂದು ಹೆಸರು ಬರೆದುಕೊಂಡು ಹೋದರು" ಎಂದು ಹೇಳಿದ. ಅಂದರೆ ಆ ದಿನ ಊರಿಗೆ ಇವರು ಬಂದಾಗ ಸಬ್ಸಿಡಿ ವಿಚಾರಕ್ಕೆ ಹೆಸರು ಬರೆದುಕೊಂಡಿದ್ದ ಅಧಿಕಾರಿಯನ್ನು ಗುರುತಿಸಿದನೇ ಹೊರತು ಮಾನ್ಯ ರಂಗನಾಥ್‌ರವರು ಹೇಳಿದ ಹಾಗೆ ಯಾವ ಹೊಸ ಬೀಜ ಬಂದಿದೆ, ಯಾವ ಹೊಸ ತಂತ್ರಜ್ಞಾನ ಬಂದಿದೆ, ಎಂದು ಹೊಸ ವಿಷಯವನ್ನು ರೈತರಿಗೆ ಮುಟ್ಟಿಸತಕ್ಕಂಥ ಕೆಲಸ ಯಾರು ಮಾಡಿಲ್ಲ. ಈ ಕೆಲಸವಾಗಿಲ್ಲವೆಂದು ನಾನು ಐದು ವರ್ಷಗಳ ಕಾಲ ಇದೇ ಇಲಾಖೆಯ ಸಚಿವನಾಗಿ ಕೆಲಸ ಮಾಡಿದ್ದರೂ ಈ ಮಾತನ್ನು ಹೇಳುವುದಕ್ಕೆ ನನಗೆ ಸಂಕೋಚವಿಲ್ಲ. ಮಾನ್ಯ ರಂಗನಾಥ್‌ರವರು ಹೇಳಿದ ಹಾಗೆ ಆ ರೀತಿಯ ವ್ಯವಸ್ಥೆಯನ್ನು ನಾವಿಂದು ನಿರ್ಮಾಣ ಮಾಡಿದ್ದೇವೆ. ಉದಾಹರಣೆಗೆ ಹೇಳುವುದಾದರೆ ಕೃಷಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳನ್ನು ಹಳ್ಳಿಗಳಿಗೆ ವರ್ಷದಲ್ಲಿ ಎಷ್ಟು ಸಾರಿ ಕಳುಹಿಸುತ್ತಾರೆಂದರೆ, ಒಂದು ಸೆಮಿಸ್ಟಾರ್ ಎಂದು ಹೇಳಿ ಮೂರು ತಿಂಗಳು ಹಳ್ಳಿಯಲ್ಲಿ ಇರಬೇಕು ಎಂದು ಇದೆ. ಆದರೆ ಆ ವಿದ್ಯಾರ್ಥಿಗಳು ಮೂರು ತಿಂಗಳು ಇರುವುದಿಲ್ಲ ಮೂರು ದಿವಸ ಕೂಡ ಹಳ್ಳಿಯಲ್ಲಿ ಇರುವುದಿಲ್ಲ. ಅದಕ್ಕೆ ನಾನು ಏನು ಮಾಡಿದ್ದೇ ಎಂದರೆ, ಬಿತ್ತನೆ ಮಾಡಿದಂಥ ಕಾಲದಲ್ಲಿ ವಿಜ್ಞಾನಿಗಳು, ವಿದ್ಯಾರ್ಥಿಗಳು ಎಲ್ಲರೂ ಸಹಿತ ಹಳ್ಳಿಯಲ್ಲಿರಬೇಕು ಎಂದು ಕಡ್ಡಾಯ ಮಾಡಿದ್ದೆ. ಆದರೆ ಇದು ಎಷ್ಟರ ಮಟ್ಟಿಗೆ ಜಾರಿಗೆ ಇದೆಯೋ ಗೊತ್ತಿಲ್ಲ.

ಡಾ|| ಜಿ. ಪರಮೇಶ್ವರ್ : ಮಾನ್ಯ ಉಪಾಧ್ಯಕ್ಷರೆ, ಈಗ ವಿಷಯ ಇರುವುದು ನೀರು ಬಳಕೆದಾರರ ಸಂಘದ ಬಗ್ಗೆ. ಆದರೆ ಇವರು ಕೃಷಿ ಇಲಾಖೆಯ ಬಗ್ಗೆ, ವಿಜ್ಞಾನಿಗಳ ಬಗ್ಗೆ, ವಿದ್ಯಾರ್ಥಿಗಳ ಬಗ್ಗೆ, ಕೃಷಿ ಕಾಲೇಜಿನ ಬಗ್ಗೆ, ಇಸ್ರೇಲ್ ಪ್ರವಾಸದ ಬಗ್ಗೆ ಹೇಳುತ್ತಾ ಹೋದರೆ ಇದು ಹೇಗೆ? ದಯಮಾಡಿ ಮಾನ್ಯ ಸದಸ್ಯರು ವಿಷಯಕ್ಕೆ ಸೀಮಿತವಾದರೆ ಚೆನ್ನಾಗಿರುತ್ತದೆ. ನೀವು ವಿಷಯವನ್ನು ಡೀವಿಯೇಟ್ ಮಾಡಿದಾಗ ನಾವು ಕೂಡ ಡೀವಿಯೇಟ್ ಆಗಬೇಕಾಗುತ್ತದೆ. ಅದಕ್ಕೋಸ್ಕರ ತಾವು ಸ್ವಲ್ಪ ವಿಷಯಕ್ಕೆ ಸೀಮಿತವಾದರೆ ಒಳ್ಳೆಯದೆಂದು ನನ್ನ ಭಾವನೆ.

ಶ್ರೀ ಸಿ. ಬೈರೇಗೌಡ : ನಮ್ಮ ವ್ಯವಸ್ಥೆ ಇವತ್ತಿನದಿವಸ ಯಾವರೀತಿ ನಡೆಯುತ್ತಿದೆ ಎಂಬುದನ್ನು ಸನ್ಮಾನ್ಯ ರಂಗನಾಥ್‌ರವರು ಹೇಳಿದರು. ಆದ್ದರಿಂದ ನಾನು ಇಷ್ಟೆಲ್ಲಾ ಹೇಳಿದೆಯಷ್ಟೆ.

ಶ್ರೀ ವೈ.ಕೆ. ರಾಮಯ್ಯ : ಸನ್ಮಾನ್ಯ ಉಪಾಧ್ಯಕ್ಷರೆ, ಈಗ ಸನ್ಮಾನ್ಯ ಬೈರೇಗೌಡರು ಮಾಡುತ್ತಿರುವ ಭಾಷಣವನ್ನು ಕೇಳುತ್ತಾ ನಮ್ಮಲ್ಲಿಯೇ ಏಕೋ ಅನುಮಾನ ಬರುತ್ತಿದೆ. ಏಕೆಂದರೆ, ನಾವು ನಮ್ಮ ಕ್ಷೇತ್ರಕ್ಕೆ ಹೋದಾಗ ಅಲ್ಲಿನ ಜನರು ಇವತ್ತಿನದಿವಸ ವಿಧಾನ ಸಭೆಯಲ್ಲಿ ಯಾವ ವಿಷಯದ ಬಗ್ಗೆ ಚರ್ಚೆ ಆಯಿತು ಎಂದು ನಮ್ಮನ್ನು ಕೇಳಿದಾಗ, ಸನ್ಮಾನ್ಯ ಬೈರೇಗೌಡರು ಇಸ್ರೇಲ್ ದೇಶಕ್ಕೆ ಪ್ರವಾಸ ಕೈಗೊಂಡಿದ್ದ

ಬಗ್ಗೆ ಮಾಡಿದಂಥ ಭಾಷಣವನ್ನು ಕೇಳಿಕೊಂಡು ಬಂದೆವು ಎಂದು ಹೇಳಬೇಕೆ? ಅಥವಾ ನೀರಾವರಿ ನಿರ್ವಹಣೆಗಾಗಿ ಸೊಸೈಟಿಗಳನ್ನು ಸ್ಥಾಪನೆ ಮಾಡುವ ಬಗ್ಗೆ ಭಾಷಣ ಮಾಡಿದ್ದನ್ನು ನಾವು ಕೇಳಿಕೊಂಡು ಬಂದೆವು ಎಂದು ಹೇಳಬೇಕೆ ಎಂಬುದನ್ನು ತಾವೇ ದಯವಿಟ್ಟು ನಮಗೆ ತಿಳಿಸಬೇಕು. ಯಾವ ವಿಷಯದ ಬಗ್ಗೆ ಭಾಷಣ ಆಯಿತು ಎಂಬುದನ್ನು ತಾವಾದರೂ ಯೋಚನೆ ಮಾಡಿ ರೂಲಿಂಗ್ ಕೊಡಿ. ಸನ್ಮಾನ್ಯ ಬೈರೇಗೌಡರಿಗೆ ವ್ಯವಸಾಯದ ಬಗ್ಗೆ ಇರತಕ್ಕಂಥ ಪಾಂಡಿತ್ಯದ ಬಗ್ಗೆ ನಮಗೆ ಅನುಮಾನ ಇಲ್ಲ. ಹಾಗೆಯೇ ಅವರ ವಾಗ್ಜಾಲದ ಬಗ್ಗೆ ನಮಗೆ ಒಂದು ಕಿಂಚಿತ್ತು ಅನುಮಾನ ಇಲ್ಲ. ಆದರೆ ಈ ಸಂದರ್ಭದಲ್ಲಿ ನಮ್ಮ ಪ್ರಾರ್ಥನೆ ಏನೆಂದರೆ, ನಮ್ಮ ರಾಜ್ಯದಲ್ಲಿ ನೀರಾವರಿಯನ್ನು ನಿರ್ವಹಣೆ ಮಾಡುವುದಕ್ಕೆ ಸೊಸೈಟಿಗಳನ್ನು ಮಾಡಬೇಕೆಂದು ಸರ್ಕಾರ ಒಂದು ಕಾನೂನನ್ನು ತಂದಿದೆ. ಆದ್ದರಿಂದ ಇದರ ಉಪಯುಕ್ತತೆಯ ಬಗ್ಗೆ ಮತ್ತು ಅಸ್ತಿತ್ವದ ಬಗ್ಗೆ ಹಾಗೂ ಈ ಸೊಸೈಟಿಯನ್ನು ನಡೆಸುವುದರ ಬಗ್ಗೆ ತಾವು ಭಾಷಣ ಮಾಡಿದರೆ ನಾವು ಕೇಳುತ್ತೇವೆ.

ಶ್ರೀ ಸಿ. ಬೈರೇಗೌಡ : ನಾನು ಈಗ ಪ್ರಸ್ತಾಪ ಮಾಡುತ್ತಿರುವ ವಿಷಯ ಏನೆಂದರೆ, ನೀರನ್ನು ಯಾವ ರೀತಿ ಸದ್ಬಳಕೆ ಮಾಡಬೇಕು ಎಂಬುದರ ಬಗ್ಗೆ ಮಾತನಾಡುತ್ತಿದ್ದೇನೆ. ನೀರನ್ನು ಸದ್ಬಳಕೆ ಮಾಡಬೇಕಾದರೆ ಯಾವ ಬೆಳೆ ಹಾಕಬೇಕೆಂಬುದು ಮತ್ತು ಕಡಿಮೆ ನೀರಿಗೆ ಯಾವ ಬೆಳೆ ಹಾಕಬೇಕೆಂಬುದು ಹಾಗೆಯೇ ಹೆಚ್ಚು ನೀರಿಗೆ ಯಾವ ಬೆಳೆಯನ್ನು ಹಾಕಬೇಕೆಂಬುದರ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಬೈರೇಗೌಡರು ಬೇರೆ ವಿಷಯದ ಬಗ್ಗೆ ಭಾಷಣ ಮಾಡುತ್ತಿದ್ದಾರೆ. ಆದ್ದರಿಂದ ಈಗ ತಂದಿರತಕ್ಕಂಥ ಬಿಲ್ ಬಗ್ಗೆ ಮಾತ್ರ ಭಾಷಣ ಮಾಡಬೇಕೆಂದು ಸನ್ಮಾನ್ಯ ರಾಮಯ್ಯನವರು ಈಗಾಗಲೇ ಪ್ರಸ್ತಾಪ ಮಾಡಿದರು. ಆದರೆ ಸನ್ಮಾನ್ಯ ಬೈರೇಗೌಡರು ಸಂಪೂರ್ಣವಾಗಿ ಈ ಬಿಲ್‌ಗೆ ಸಂಬಂಧಪಟ್ಟಂತೆಯೆ ಮಾತನಾಡುತ್ತಿದ್ದಾರೆ. ಅವರು ಪ್ರಸ್ತಾಪ ಮಾಡುತ್ತಿರುವ ಎಲ್ಲಾ ಅಧಿಕಾರವನ್ನು ಸಂಪೂರ್ಣವಾಗಿ ಸೊಸೈಟಿಗೆ ಕೊಡಬೇಕೆಂದು ಮಾನ್ಯ ಬೈರೇಗೌಡರು ತಮ್ಮ ಭಾಷಣದಲ್ಲಿ ಮುಂದೆ ಹೇಳುತ್ತಾರೆ. ನಾನು ಸಹ ಈ ಬಿಲ್ ನೋಡಿದ್ದೇನೆ. ಇದರಲ್ಲಿ ಎಲ್ಲಾ ಅಧಿಕಾರವನ್ನು ಸರ್ಕಾರವೇ ಇಟ್ಟುಕೊಂಡಿದೆ. ಸೊಸೈಟಿಗೆ ಯಾವುದೇ ರೀತಿಯ ಅಧಿಕಾರವನ್ನು ಕೊಟ್ಟಿಲ್ಲ. ಇದರ ಬಗ್ಗೆ ನಾನು ಸಹ ಮಾತನಾಡಬೇಕಾಗಿದೆ.

ಶ್ರೀ ವೈ.ಕೆ. ರಾಮಯ್ಯ : ಸನ್ಮಾನ್ಯ ಹನುಮೇಗೌಡರು ಹೇಳಿದ ಹಾಗೆ, ಇವೆಲ್ಲವನ್ನು ಮಾಡಿ ಹುಟ್ಟು ಸಹಕಾರಿಗಳ ಕೈಗೆ ಕೊಡಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ನೀರಿನ ಸದ್ಬಳಕೆ ಬಗ್ಗೆ ಹೇಳುವುದಾದರೆ, ಇವತ್ತಿನ ದಿವಸ ತುಂಗಭದ್ರ ಅಚ್ಚುಕಟ್ಟು ಪ್ರದೇಶದಲ್ಲಿ ಸುಮಾರು 60 ಸಾವಿರ ಎಕರೆ ಭೂಮಿ, ಚೌಳು ಅಥವಾ ಅಲ್ಕಲೈನ್, ಆಸಿಡಿಕ್ ಆಗಿದೆ. ಇಲ್ಲಿ ಒಂದು ಹುಲ್ಲು ಕಡ್ಡಿಯನ್ನು ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ರೈತರು ಒಳ್ಳೆಯ ಬೆಳೆಯನ್ನು ಬೆಳೆಯಬೇಕೆಂಬ ಕಾರಣಕ್ಕೋಸ್ಕರ ತುಂಗಭದ್ರ ಜಲಾಶಯದ ಯೋಜನೆಗಾಗಿ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಆದರೆ, ಅಲ್ಲಿರತಕ್ಕಂಥ ಭೂಮಿಯನ್ನು ಹಾಳು ಮಾಡಬೇಕೆಂಬ ದೃಷ್ಟಿಯಿಂದ ಈ ಯೋಜನೆಯನ್ನು

ಮಾಡಿಲ್ಲ. ಈಗ ಅಲ್ಲಿರತಕ್ಕಂಥ ಭೂಮಿ ಏಕೆ ಈಗಾಯಿತೆಂಬುದರ ಬಗ್ಗೆ ತಾವು ಕೂಡ ಅರ್ಥ ಮಾಡಿಕೊಳ್ಳುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ವೈ.ಕೆ. ರಾಮಯ್ಯ : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬೈರೇಗೌಡರು ಹೇಳುತ್ತಿರುವ ಎಲ್ಲಾ ಅಂಕಿ-ಅಂಶಗಳು ನನಗೂ ಸಹ ಗೊತ್ತಿದೆ. ಇವತ್ತಿನ ದಿವಸ 13 ಲಕ್ಷ ಎಕರೆಗೆ ಆಗುವಂತಹ ನೀರು ನಮ್ಮಲ್ಲಿರತಕ್ಕಂಥ ಕೆರೆ-ಕಟ್ಟೆಗಳಲ್ಲಿ ತುಂಬಿಕೊಂಡಿದೆ. ಇದನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ನಾವು ಇದುವರೆಗೂ ಕಾಲುವೆಗಳನ್ನು ಮಾಡಿಕೊಂಡಿಲ್ಲ. ಈ ವಿಷಯವನ್ನು ಪ್ರತ್ಯೇಕವಾಗಿ ಇಲ್ಲಿ ಚರ್ಚೆ ಮಾಡೋಣ. ಸೊಸೈಟಿಯ ಮುಖಾಂತರ ನೀರನ್ನು ವಿತರಣೆ ಮಾಡತಕ್ಕಂಥ ವಿಷಯದ ಬಗ್ಗೆ ದಯಮಾಡಿ ಭಾಷಣ ಮಾಡಬೇಕೆಂದು ನಾನು ಈಗಾಗಲೇ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದೆ. ಆದ್ದರಿಂದ ಇದಕ್ಕೆ ಸೀಮಿತವಾಗಿ ಮಾತನಾಡಿ. ಜೌಗು ಭೂಮಿಯ ಬಗ್ಗೆ ಮತ್ತು ರಾಜ್ಯ ಮತ್ತು ರಾಷ್ಟ್ರದಲ್ಲಿ ನೀರಾವರಿ ಹಂಚಿಕೆ ಬಗ್ಗೆ ಬೇರೊಂದು ದಿವಸ ಸಮಯ ತೆಗೆದುಕೊಂಡು ಚರ್ಚೆ ಮಾಡೋಣ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ನಾನು ಇದೇ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ನಾನು ಈಗಾಗಲೇ ಹೇಳಿದಂತೆ, ತುಂಗಭದ್ರ ಅಚ್ಚು ಕಟ್ಟು ಪ್ರದೇಶದಲ್ಲಿ ಸುಮಾರು 60 ಸಾವಿರ ಎಕರೆ ಭೂಮಿಯಲ್ಲಿ ಒಂದು ಹುಲ್ಲು ಕಡ್ಡಿ ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಇದೇ ರೀತಿಯಾಗಿ ರಾಜ್ಯದಲ್ಲಿರತಕ್ಕಂಥ ನೀರಾವರಿ ಅಚ್ಚುಕಟ್ಟು ಪ್ರದೇಶಗಳಲ್ಲಿ ಆಗುವ ಸಾಧ್ಯತೆ ಇದೆ. ಈಗಾಗಲೇ ಬೆಳಗಾಂ ಜಿಲ್ಲೆಯಲ್ಲಿರತಕ್ಕಂಥ ಕೆಲವು ನೀರಾವರಿ ಯೋಜನೆಗಳಲ್ಲಿ ಇದು ಪ್ರಾರಂಭವಾಗಿದೆ. ಇವತ್ತಿನದಿವಸ ನಾವು ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಭೂಮಿಯನ್ನು ಹಾಳು ಮಾಡುತ್ತಿದ್ದೇವೆ ಹೊರತು ರೈತರಿಗೆ ಇದರಿಂದ ಏನು ಪ್ರಯೋಜನವಾಗುತ್ತಿಲ್ಲ. ಇದನ್ನು ತಡೆಗಟ್ಟುವುದಕ್ಕೆ ಏನಾದರೊಂದು ವ್ಯವಸ್ಥೆ ಈ ಬಿಲ್‌ನಲ್ಲಿ ಇಲ್ಲ. ಸಾಲು ಮರ ಮತ್ತು ಕಾಲುವೆ ತೆಗೆಯುವುದರ ಬಗ್ಗೆ ಮತ್ತು ಚರಂಡಿ ತೆಗೆಯುವುದರ ಬಗ್ಗೆ ಈ ಬಿಲ್‌ನಲ್ಲಿ ಮೆನ್‌ಷನ್ ಮಾಡಿದ್ದೀರಿ. ಇದು ಬಹಳ ಒಳ್ಳೆಯದು. ಆದರೆ ನೀರಾವರಿ ಬಗ್ಗೆ ಮೂಲಭೂತವಾಗಿರತಕ್ಕಂಥ ವಿಚಾರಗಳನ್ನು ಸರಿಪಡಿಸುವಂಥದ್ದಕ್ಕೆ ತಾವು ಇದರಲ್ಲಿ ಪ್ರಯತ್ನ ಮಾಡಿಲ್ಲ. ವ್ಯವಸಾಯಕ್ಕೆ ನೀರನ್ನು ನೆನ್ನೆ ಅಥವಾ ಇವತ್ತಿನಿಂದ ಬಳಸಿಕೊಳ್ಳುತ್ತಿಲ್ಲ. ವ್ಯವಸಾಯ ಯಾವತ್ತಿನಿಂದ ಪ್ರಾರಂಭವಾಯಿತು ಅಂದಿನಿಂದಲೂ ಸಹ ವ್ಯವಸಾಹಯಕ್ಕೆ ನೀರನ್ನು ಬಳಸಿಕೊಂಡು ಬಂದಿದ್ದೇವೆ. ನೀರಾವರಿಗೋಸ್ಕರ ನಮ್ಮ ರಾಜ್ಯದಲ್ಲಿ ದೊಡ್ಡ ದೊಡ್ಡ ಯೋಜನೆಗಳನ್ನು ಮಾಡಿದ್ದೇವೆ. ಹಾಗೆಯೇ ನಮ್ಮ ರಾಜ್ಯದಲ್ಲಿ ಭೂಮಿ ಯಾವ್ಯಾವ ಕಾರಣಗಳಿಂದ ಹಾಳಾಗಿದೆ ಎಂಬುದರ ಬಗ್ಗೆ ನಮ್ಮ ಹತ್ತಿರ ಅಂಕಿ-ಅಂಶಗಳಿವೆ. ಭೂಮಿ ಹಾಳಾಗುವುದನ್ನು ತಪ್ಪಿಸುವುದಕ್ಕೆ ತಾವು ಪ್ರಯತ್ನ ಪಟ್ಟಿದ್ದರೆ ನನಗಂತೂ ಸಹ ಸಂತೋಷವಾಗುತ್ತಿತ್ತು. ಈ ಬಿಲ್‌ನಲ್ಲಿ ವೈಜ್ಞಾನಿಕ ರೀತಿಯಲ್ಲಿ ನೀರನ್ನು ಉಪಯೋಗ ಮಾಡತಕ್ಕಂಥದರ ಬಗ್ಗೆ ಆಲೋಚನೆ ಮಾಡಿಲ್ಲ. ಸನ್ಮಾನ್ಯ ರಾಮಯ್ಯನವರು ಇದನ್ನು ತಿಳಿದುಕೊಳ್ಳಬೇಕು. ಏಕೆಂದರೆ ಅವರು ಈ ಬಿಲನ್ನು ಓದಿಕೊಂಡು ಬಂದಿದ್ದಾರಯೋ ಅಥವಾ ಬೇರೇನೋ ಓದಿಕೊಂಡು ಬಂದಿದ್ದಾರೆಯೋ ನನಗಂತೂ ಸಹ ಗೊತ್ತಿಲ್ಲ.

ಶ್ರೀ ವೈ.ಕೆ. ರಾಮಯ್ಯ : ನೀರಿನ ಸದ್ಬಳಕೆಗೆ ನಿಮ್ಮ ವೈಜ್ಞಾನಿಕ ಚಿಂತನೆಗಳು ಯಾವ್ಯಾವು ಎಂಬುದನ್ನಾದರು ಹೇಳಿ.

ಶ್ರೀ ಸಿ. ಬೈರೇಗೌಡ : ಇಷ್ಟು ಹೊತ್ತು ನಾನು ಅದೇ ವಿಷಯವನ್ನು ಹೇಳಿದ್ದೇನೆ. ನಿಮಗೆ ಅರ್ಥವಾಗದೇ ಇದ್ದರೆ ನಾನೇನು ಮಾಡಲಿ?

ಶ್ರೀ ಬಿ.ಎನ್. ಬಚ್ಚೇಗೌಡ : ಸನ್ಮಾನ್ಯ ವೈ.ಕೆ. ರಾಮಯ್ಯನವರು ಈಗಾಗಲೇ ಹೇಳಿದಂತೆ ಈ ವಿಷಯಕ್ಕೆ ಸಂಬಂಧಪಟ್ಟಂತೆ ಬೇರೊಂದು ದಿವಸ ಚರ್ಚೆ ಮಾಡೋಣ.

ಶ್ರೀ ವೈ.ಕೆ. ರಾಮಯ್ಯ : ಸನ್ಮಾನ್ಯ ಬೈರೇಗೌಡರಿಂದ ನಾನು ನಿರೀಕ್ಷೆ ಮಾಡುವುದೇನೆಂದರೆ, ನೀರಿನ ಸದ್ಬಳಕೆ ಇವತ್ತಿನದಿವಸ ಅನಿವಾರ್ಯ, ಹಾಗೆಯೇ ನೀರಿನ ಲಭ್ಯತೆ ಇವತ್ತು ಕಡಿಮೆಯಾಗುತ್ತಿದೆ. ಆದ್ದರಿಂದ ನೀರಿನ ಅನಿವಾರ್ಯತೆಯನ್ನು ಕಾಪಾಡಲಿಕ್ಕೆ ಮತ್ತು ನಿಭಾಯಿಸಲಿಕ್ಕೆ ವೈಜ್ಞಾನಿಕವಾದ ಮಾರ್ಗಗಳು ಯಾವ್ಯಾವು ಎಂಬುದನ್ನು ಸನ್ಮಾನ್ಯ ಬೈರೇಗೌಡರು ಹೇಳುತ್ತಾ ಹೋದರೆ ನಾನು ಬರೆದುಕೊಳ್ಳುತ್ತೇನೆ. ಇದನ್ನು ಬಿಟ್ಟು ಇವರು ಇಸ್ರೇಲ್ ಬಗ್ಗೆ ಭಾಷಣ ಮಾಡಿದರೆ ನಾನೇನು ಮಾಡಲಿ? ಆದ್ದರಿಂದ ನಾನು ಈಗಾಗಲೇ ಹೇಳಿದಂತಹ ವಿಷಯಕ್ಕೆ ಸಂಬಂಧಪಟ್ಟಂತೆ ನಿಮ್ಮ ಚಿಂತನೆ ಅಥವಾ ನಿಮ್ಮ ದಾರಿ ಏನು ಎಂಬುದನ್ನು ದಯಮಾಡಿ ತಿಳಿಸಿದರೆ ನಾನು ಅದನ್ನು ಬರೆದುಕೊಂಡು. ನಾನು ಮಾತನಾಡುವಂಥ ಸಂದರ್ಭದಲ್ಲಿ ಮಾನ್ಯ ಮಂತ್ರಿಯವರಿಗೆ ಈ ವಿಷಯವನ್ನು ತಿಳಿಸುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ : ಈಗಾಗಲೇ ಮಾನ್ಯ ಬೈರೇಗೌಡರು ಹೇಳಿದ ಹಾಗೆ ಮಾನ್ಯ ರಾಮಯ್ಯನವರು ಈ ಬಿಲನ್ನು ಓದಿಲ್ಲವೆಂದು ಕಾಣುತ್ತದೆ. "Functions of the water users society. To educate and train land holders in the efficient and economical use of water and adoption of new technology as well as to implement necessary programmes". ಸನ್ಮಾನ್ಯ ಬೈರೇಗೌಡರು ಪ್ರಸ್ತಾಪ ಮಾಡುತ್ತಿರುವ ಎಲ್ಲಾ ಅಂಶಗಳು ಈ ಬಿಲ್‌ನಲ್ಲಿ ಇದೆ. ನೀವು ಈ ಬಿಲ್‌ನಲ್ಲಿ ಕೊಟ್ಟಿರತಕ್ಕಂಥ ಎಲ್ಲಾ ಅಂಶಗಳು ವ್ಯವಸಾಯಕ್ಕೆ ಸಂಬಂಧಪಟ್ಟಿರುವುದರಿಂದ ಮಾನ್ಯ ಸದಸ್ಯರು ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಆದರೆ, ಇವರು ಬೇರೆ ವಿಷಯವನ್ನು ತೆಗೆದುಕೊಂಡು ಮಾತನಾಡುತ್ತಿದ್ದಾರೆಂದು ತಾವು ಹೇಳುತ್ತಿದ್ದೀರಿ. ಇದು ಯಾವ ನ್ಯಾಯ?

ಶ್ರೀ ಬಿ.ಬಿ. ಶಿವಪ್ಪ (ಸಕಲೇಶ್ವರ) : ಸನ್ಮಾನ್ಯ ಉಪಾಧ್ಯಕ್ಷರೆ, ನಾವು ಇಲ್ಲಿ ನೀರಿನ ಬಳಕೆಯ ಬಗ್ಗೆ ಮಾತನಾಡುತ್ತಿದ್ದೇವೆ. ಆದ್ದರಿಂದ, ಇದರ ಬಗ್ಗೆ ರೈತನಿಗೆ ಮೊದಲು ಶಿಕ್ಷಣ ಕೊಡಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಭತ್ತ ಬೆಳೆಯುವ ಗದ್ದೆಯಲ್ಲಿ ಅರ್ಧ ಇಂಚು ನೀರು ನಿಲ್ಲಿಸಿದರೆ ಸಾಕೆಂದು ಮಾನ್ಯ ಬೈರೇಗೌಡರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಇವತ್ತಿನದಿವಸ ಮೇಲ್‌ಭಾಗದ ಜಾಗದಲ್ಲಿ ಅರ್ಧ ಇಂಚು ನೀರನ್ನು ನಿಲ್ಲಿಸಿದರೆ, ಕೆಳ ಭಾಗದಲ್ಲಿರತಕ್ಕಂಥ ಜಾಗದಲ್ಲಿ ಸುಮಾರು ಮುಕ್ಕಾಲು ಇಂಚು ನೀರು ನಿಂತ್ತೆ ನಿಲುತ್ತದೆ. ಏಕೆಂದರೆ ನಮ್ಮ ಭೂಮಿ ಇರುವುದೇ ಹೀಗೆ. ಆದ್ದರಿಂದ ಇವತ್ತಿನದಿವಸ ನಾವು ಮೊದಲು ಭೂಮಿಯನ್ನು ಲೆವೆಲ್ ಮಾಡಬೇಕು. ನಾವು ಭೂಮಿಯನ್ನು ಲೆವೆಲ್ ಮಾಡವಂಥದು ಹೇಗೆ ಇರಬೇಕೆಂದರೆ, ಅರ್ಧ ಇಂಚು ನೀರನ್ನು ಬಿಟ್ಟರೆ ಎಲ್ಲಾ ಕಡೆಯೂ ಸಹ ಅರ್ಧ ಇಂಚು ನೀರು ನಿಲ್ಲುವಂತೆ ಇರಬೇಕು. ಸನ್ಮಾನ್ಯ ರಂಗನಾಥ್‌ರವರು ಹೇಳಿದ ಹಾಗೆ, ಇವತ್ತಿನದಿವಸ ಮಲೆನಾಡು ಪ್ರದೇಶದಲ್ಲಿ ಭತ್ತವನ್ನು ಬೆಳೆಯುವುದನ್ನೆ ನಿಲ್ಲಿಸಿ ಬಿಟ್ಟಿದ್ದೇವೆ. ಈಗ ಕೇವಲ ಕಾಫಿ, ಏಲಕ್ಕಿ ಮತ್ತು ಅಡಿಕೆ

ಬೆಳೆಯನ್ನು ಮಾತ್ರ ಬೆಳೆಯಲಾಗುತ್ತಿದೆ. ಇದರಿಂದ ಮಲೆನಾಡು ಪ್ರದೇಶದಲ್ಲಿ ಭತ್ತವೇ ಸಿಗುವುದಿಲ್ಲ. ಬಯಲು ಸೀಮೆ ಪ್ರದೇಶದಿಂದ ನಮ್ಮ ಭಾಗಕ್ಕೆ ಭತ್ತವನ್ನು ಕಳುಹಿಸಬೇಕಾದಂಥ ಪರಿಸ್ಥಿತಿ ಬಂದಿದೆ. ಇವತ್ತಿನದಿವಸ ಭೂಮಿಯ ಬಗ್ಗೆ ರೈತನಿಗೆ ಶಿಕ್ಷಣ ಕೊಡತಕ್ಕಂಥ ಕೆಲಸ ಮೊದಲು ಆಗಬೇಕು. ನಾಟಿ ಮಾಡಿ ನೀರು ಕಟ್ಟುವಂಥ ನಮ್ಮ ಅಜ್ಜನ ಕಾಲದ ಲೆಕ್ಕದಲ್ಲಿಯೆ ನಾವೆಲ್ಲರೂ ಸಹ ಇದ್ದೇವೆ. 15 ದಿವಸಕ್ಕೊಂದು ಸಾರಿ ನೀರನ್ನು ಗದ್ದೆಯಿಂದ ಹೊರಕ್ಕೆ ಬಿಡತಕ್ಕಂಥ ಪದ್ಧತಿ ಇದೆ. ಆದರೆ ಈ ಪದ್ಧತಿಯನ್ನು ಯಾರು ಮಾಡುತ್ತಿಲ್ಲ. ನಾವು ಒಂದು ಸಾರಿ ನೀರನ್ನು ಗದ್ದೆಗೆ ಕಟ್ಟಿದರೆ, ಇನ್ನು ಕೊನೆಯಲ್ಲಿ ಅಂದರೆ ಫಸಲನ್ನು ಕೊಯ್ಲು ಮಾಡುವಂಥ ಸಂದರ್ಭದಲ್ಲಿ ಮಾತ್ರ ನೀರನ್ನು ಬಿಡುತ್ತಾರೆ. ಕೊಯ್ಲು ಆಗುವವರೆಗೂ ನೀರು ಇರಬೇಕೆಂದು ನಮ್ಮ ಈಗಿನ ಲೆಕ್ಕವಾಗಿದೆ. ಈ ಪದ್ಧತಿ ಅಷ್ಟು ಸುಲಭವಾಗಿ ಹೋಗುವುದಿಲ್ಲ. ಆದ್ದರಿಂದ ಇದನ್ನು ತಡೆಗಟ್ಟಬೇಕಾದರೆ ನಿಧಾನವಾಗಿ ರೈತರೆಲ್ಲರಿಗೂ ವಿದ್ಯಾಭ್ಯಾಸ ಮಾಡಿಸಿಕೊಂಡು ಹೋಗಬೇಕಾಗುತ್ತದೆ. ಇದರ ಒಂದು ಸುಧಾರಣೆ ಬಗ್ಗೆ ಮಾನ್ಯ ಮಂತ್ರಿಯವರು ಏನೊಂದು ಕಾರ್ಯಕ್ರಮ ಹಾಕಿಕೊಂಡಿದ್ದಾರೆಯೋ, ಅದೇ ರೀತಿ ಭೂಮಿಯನ್ನು ಹದ ಮಾಡುವುದರಿಂದ ಹಿಡಿದು ನೀರನ್ನು ನಿಲ್ಲಿಸುವವರೆಗೂ ಮಾಡಿದರೆ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟುಪಡುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಈ ಸಂದರ್ಭದಲ್ಲಿ ಏನು ಹೇಳಬೇಕೆಂದು ಇಷ್ಟಪಟ್ಟಿದ್ದೆನೋ ಅದನ್ನು ಸನ್ಮಾನ್ಯ ಶ್ರೀನಿವಾಸಗೌಡರವರು ಈಗಾಗಲೇ ಹೇಳಿದ್ದಾರೆ. ಅಂದರೆ, ಇದಕ್ಕೆ ಸಂಬಂಧಪಟ್ಟ ಪರ್ಟಿಕ್ಯುಲರ್ ಪ್ಯಾರಾಗ್ರಫನ್ನು ಓದಿದ್ದಾರೆ. ತಾವು ಈ ಸಂದರ್ಭದಲ್ಲಿ ವೈಜ್ಞಾನಿಕವಾಗಿ ನೀರನ್ನು ವಿತರಣೆ ಮಾಡತಕ್ಕಂಥ ಪದ್ಧತಿ ಆಗಬೇಕೆಂದು ಬಯಸಿದ್ದೀರಿ. ಇವತ್ತಿನ ದಿವಸ ವೈಜ್ಞಾನಿಕವಾಗಿ ನೀರು ವಿತರಣೆ ಆಗಬೇಕಾದರೆ, volumetric releases of water ಮೊದಲು ಆಗಬೇಕಾಗುತ್ತದೆ. ಅಂದರೆ, ನೀರಿನ ಗ್ರಾತದ ಮೇಲೆ ನಾವು ನೀರು ಬಿಡತಕ್ಕಂಥದು ಆಗಬೇಕು. ಇವತ್ತಿನದಿವಸ ಇದು ಆಗಬೇಕಾದರೆ, ಬಲ್ಕ್ ಟೇಕರ್ ಒಬ್ಬರು ಬೇಕಾಗುತ್ತದೆ. ಒಂದು ಪ್ರಮಾಣದಲ್ಲಿ ನೀರನ್ನು ಒಬ್ಬ ವ್ಯಕ್ತಿ ಅಥವಾ ಒಂದು ಸಂಸ್ಥೆ ತೆಗೆದುಕೊಳ್ಳಬೇಕಾಗುತ್ತದೆ. ಈಗ ಸೊಸೈಟಿಯನ್ನು ಜಾರಿಗೆ ತಂದಂಥ ಸಂದರ್ಭದಲ್ಲಿ ಸೈಂಟಿಫಿಕ್ ರಿಲೀಸ್ ಆಫ್ ವಾಟರ್, ವ್ಯಾಲ್ಯು ಮೆಟ್ರಿಕ್ ರಿಲೀಸ್ ಆಫ್ ವಾಟರನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಸನ್ಮಾನ್ಯ ಬೈರೇಗೌಡರಿಗೆ ಇದು ಗೊತ್ತಿಲ್ಲದೇ ಇರತಕ್ಕಂಥ ವಿಷಯವಲ್ಲ. ನಮ್ಮ ನೀರಾವರಿ ಇಲಾಖೆಯವರು ಹೊಸದಾಗಿ ಇರಿಗೇಶನ್ ರಿಫಾರ್ಮ್ಸ್ ತಂದಿದ್ದಾರೆ. ಈಗಾಗಲೇ ನೀರಾವರಿ ಸುಧಾರಣೆಗೆ ಸಂಬಂಧಪಟ್ಟ ಅಂಶಗಳು ಕ್ಯಾಬಿನೆಟ್‌ನಲ್ಲಿ ಅನುಮತಿ ಪಡೆದುಕೊಂಡು ಜಾರಿ ಮಾಡುವುದಕ್ಕೋಸ್ಕರ ಇಲ್ಲಿ ತರಲಾಗಿದೆ. ಈ ಒಂದು ಬದಲಾವಣೆಯಲ್ಲಿ ನಮ್ಮ ಮೂಲ ಉದ್ದೇಶ ಏನೆಂದರೆ, to fix water quotas for different subsistence like distributories, sub distributories, minors and laterals. This is what you perhaps meant. ಇಸ್ರೇಲ್ ಮತ್ತು ಮೆಕ್ಸಿಕೋ ದೇಶಗಳಲ್ಲಿ ಇದನ್ನು ಜಾರಿ ಮಾಡಲಾಗಿದೆ. ಇವತ್ತಿನದಿವಸ ನಮ್ಮಲ್ಲಿರತಕ್ಕಂಥ ನೀರನ್ನು ಸಮರ್ಪಕವಾಗಿ ಬಳಕೆ ಮಾಡಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, 100 ಎಕರೆ ಪ್ರದೇಶಕ್ಕೆ ಎಷ್ಟು ಗ್ಯಾಲನ್ ಅಥವಾ ಎಂ.ಜಿ.ಡಿ. ನೀರು ಬಿಡಬೇಕೆಂದು ಅವರು ಗೊತ್ತುಪಡಿಸುತ್ತಾರೆ.

5.50 ಪಿ.ಎಂ.

ಇಸ್ರೇಲ್ ದೇಶದಲ್ಲಿ ರೈತರು ನೀರಿನ ದುರ್ಬಳಕೆಯಾಗದಂತೆ ನೋಡಿಕೊಳ್ಳುತ್ತಾರೆ ಎಂದು ಮಾನ್ಯ ಬೈರೇಗೌಡರು ತಮ್ಮ ಆತಂಕವನ್ನು ವ್ಯಕ್ತಪಡಿಸಿದರು, ವೇಸ್ಟ್ ವಾಟರ್ ಒಂದು ರೀತಿಯಾದ ಹೊಳೆಯಾಗಿ ಹರಿಯುತ್ತಿತ್ತು, ಅದನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆ. ತಾವು ಇನ್ನೊಂದು ಮೆನ್‌ಷನ್ ಮಾಡಿ ಇಸ್ರೇಲ್ ಉದಾಹರಣೆಯನ್ನು ಕೊಟ್ಟಿರುತ್ತೀರಿ. ಕಡಿಮೆ ನೀರಿನಲ್ಲಿ ಹೆಚ್ಚು ನೀರಾವರಿ ಸಾಮರ್ಥ್ಯವನ್ನು ನಾವು ಮಾಡಬೇಕಾಗುತ್ತದೆ. ಏಕೆಂದರೆ ನೀರು ಅಮೂಲ್ಯವಾದ ವಸ್ತು ಎಂದು ನಾವು ಸದ್ಬಳಕೆಯಿಂದ ಉಪಯೋಗ ಮಾಡಬೇಕೆಂದು, ಆ ಕಾರಣಕ್ಕಾಗಿ ನೀರಾವರಿ ಇಲಾಖೆಯವರು ಬರತಕ್ಕಂಥ ಈ ಸಂಸ್ಥೆಗಳನ್ನು ಉಪಯೋಗ ಮಾಡಿಕೊಂಡು ಈಗ ಇರತಕ್ಕಂಥ ಫ್ಲೋ ಇರಿಗೇಶನ್‌ಕ್ಕೆ ಮಾತ್ರ ನಮ್ಮ ನೀರಾವರಿ ಉದ್ದೇಶವನ್ನು ಸೀಮಿತಗೊಳಿಸದೆ ಸ್ಪ್ರಿಂಕ್ಲರ್, ಡ್ರಿಪ್‌ವರೆಗೆ ಹೋಗುವಂತೆ ಮಾಡಬೇಕೆನ್ನುವ ಉದ್ದೇಶದಿಂದ ನಮ್ಮ ಇರಿಗೇಶನ್ ರಿಫಾರ್ಮ್ಸ್‌ನ್ನು ಸರಕಾರದ ಸಚಿವ ಸಂಪುಟ ಈಗಾಗಲೇ ಒಪ್ಪಿಗೆಯನ್ನು ನೀಡಿದೆ. ಅವುಗಳನ್ನು ಅನುಷ್ಠಾನ ಮಾಡಬೇಕಾದರೆ ಈ ಸಂಸ್ಥೆಗಳು ಒಂದು ರೀತಿ ಇನ್‌ಸ್ಟ್ರುಮೆಂಟ್ ಆಗಿ ಕೆಲಸ ಮಾಡುತ್ತವೆ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಸಿ. ಬೈರೇಗೌಡ : ಇಸ್ರೇಲ್ ದೇಶದಲ್ಲಿ ಯೂನಿಟ್ ಯಾವ ರೀತಿಯಾಗಿ ಅಳತೆ ಮಾಡುತ್ತಾರೆ ಎಂದರೆ, ಅವರು ಅದನ್ನು ಕ್ಯೂಬಿಕ್ ಮೀಟರ್ ಎಂದು ಹೇಳುತ್ತಾರೆ. ಆದರೆ ನಮ್ಮಲ್ಲಿ ಟಿಎಂಸಿ ಯ ಕೆಪ್ಯಾಸಿಟಿ ಲೆಕ್ಕದ ಮೇಲೆ ನಾವು ಹೇಳುತ್ತೇವೆ. ಅವರ ಒಂದು ಯೂನಿಟ್ ಕ್ಯೂಬಿಕ್ ಮೀಟರ್, ನಾಟ್ ಟಿಎಂಸಿ. ಮತ್ ನಾವು ಭೂಮಿಯನ್ನು ಹೆಕ್ಟೇರ್‌ದಲ್ಲಿ ಹೇಳುತ್ತೇವೆ, ಆದರೆ ಅವರು ಒನ್ ಸ್ಕ್ವಾಯರ್ ಮೀಟರ್ ಒಂದು ಕ್ಯೂಬಿಕ್ ಮೀಟರ್‌ವೆಂದು ಹೇಳುತ್ತಾರೆ. ಅವರು ಯಾವ ರೀತಿಯಾಗಿ ಭೂಮಿಯನ್ನು ಲೆಕ್ಕಾಚಾರ ಮಾಡುತ್ತಾರೆ ಎನ್ನುವುದು ವ್ಯಕ್ತವಾಗುತ್ತದೆ. ಆ ರೀತಿಯಾದಂತಹ ಆಲೋಚನೆ ನಮ್ಮ ರಾಜ್ಯದ ಬಿಜಾಪುರ, ಕೋಲಾರ, ಚಿತ್ರದುರ್ಗ ಜಿಲ್ಲೆಯನ್ನು ಇಸ್ರೇಲ್ ದೇಶಕ್ಕೆ ಹೋಲಿಸಿದರೆ ಅಂತಹ ದೊಡ್ಡ ವ್ಯತ್ಯಾಸವೇನು ಕಾಣುವುದಿಲ್ಲ. ನಮ್ಮ ಇಡೀ ದೇಶದಲ್ಲಿ ವಿಸ್ತಾರವಾದಂಥ ಬೆಂಗಾಡು ಪ್ರದೇಶ ರಾಜಸ್ತಾನ ಬಿಟ್ಟರೆ ಅಷ್ಟೇ ಬೆಂಗಾಡು ಪ್ರದೇಶ ನಮ್ಮ ರಾಜ್ಯದಲ್ಲಿ ಇದೆ. ಇಂತಹ ಪರಿಸ್ಥಿತಿ ನಮ್ಮ ರಾಜ್ಯದಲ್ಲಿರುವಾಗ ಈ ವೈಜ್ಞಾನಿಕವಾಗಿ ನೀರನ್ನು ಬಳಕೆ ಮಾಡತಕ್ಕಂಥದ್ದು ನಮ್ಮ ರಾಜ್ಯದಲ್ಲಿ ಅವಶ್ಯಕತೆ ಇದೆ ಎನ್ನತಕ್ಕಂಥದ್ದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್ : ನಮ್ಮ ರಾಜ್ಯದಲ್ಲಿ ಕೂಡ ಥೌಸಂಡ್ ಕ್ಯೂಬಿಕ್ ಮೀಟರ್ಸ್ ಮೇಲೆ ವಾಟರ್ ರೇಟನ್ನು ಚಾರ್ಜ್ ಮಾಡುತ್ತಿದ್ದೇವೆ. ಅದರಲ್ಲಿ ನಾವು ಎಷ್ಟು ಬಿಟ್ಟಿದ್ದೇವೆ, ಎಷ್ಟು ತೆಗೆದುಕೊಂಡಿದ್ದೇವೆ ಎನ್ನುವುದು ಅವರಿಗೆ ಹಾಗೂ ನಮಗೂ ಗೊತ್ತಿಲ್ಲ. ಏಕೆಂದರೆ ಅದರ ಮೆಜರ್‌ಮೆಂಟ್ ಮಾಡುವುದಕ್ಕೆ ಏನು ಡಿವೈಸ್ ಇಲ್ಲ. ಸಾವಿರ ರೈತರಿಗೆ ಕೂಡಿಸಿ ಒಂದು ಕಡೆ ಡಿಸ್ಟ್ರಿಬ್ಯೂಟರಿ ಮಾಡುತ್ತೇವೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ನಾವು ಕ್ಯೂಬಿಕ್ ಮೀಟರನ್ನು ನಾವು ಯೂನಿಟ್ಟಾಗಿ ಮಾಡಿಕೊಂಡಿರುತ್ತೇವೆ. ವೈಜ್ಞಾನಿಕವಾಗಿ ಅದರ ಅಳತೆಯಾಗುವುದಿಲ್ಲ ಅದರ ಬಳಕೆ ಏನಾಯಿತು ಎನ್ನುವುದು ನಮ್ಮಲ್ಲಿ ಎವಾಲ್ಯುಯೇಶನ್ ಇರುವುದಿಲ್ಲ.

ಶ್ರೀ ಸಿ. ಬೈರೇಗೌಡ : ಇದರ ಜೊತೆಯಲ್ಲಿ ಮಾನ್ಯ ಅರಣ್ಯ ಸಚಿವರು ಏನು ಹೇಳಿದರೆಂದರೆ, ಕೃಷಿ ಇಲಾಖೆಯಲ್ಲಿ ಅಚ್ಚುಕಟ್ಟುಗಳಿಗೆ ಕಾಡಾ ಎನ್ನುವುದು ಇದೆ, ಕೃಷಿ ಇಲಾಖೆಗೂ ಹಾಗೂ ಅಚ್ಚುಕಟ್ಟುಗಳಲ್ಲಿ ಏನು ಇಲ್ಲ. ನಾವು ಬೀಜವನ್ನು ಸರಬರಾಜು ಮಾಡಬೇಕು, ಗೊಬ್ಬರವನ್ನು ಸರಬರಾಜು ಮಾಡುವಂಥ ವ್ಯವಸ್ಥೆಯನ್ನು ಮಾಡಬೇಕು. ಔಷಧಿಯನ್ನು ಸರಬರಾಜು ಮಾಡಬೇಕು, ಕ್ರಾಪ್ ಪ್ಯಾಟರ್ನ್ ತೀರ್ಮಾನ ಮಾಡತಕ್ಕಂಥದ್ದು ಇದೆ, ಪ್ರತಿಯೊಂದು ಅಚ್ಚುಕಟ್ಟು ಇದೆ ಅದಕ್ಕೆ ಕಾಡಾ ಎಂದು ಹೆಸರು ಇದೆ. ಅಲ್ಲಿ ಕೃಷಿ ಇಲಾಖೆಯವರು ಹಾಗೂ ನೀರಾವರಿ ಇಲಾಖೆಯವರು ಮತು ಬೇರೆ ಬೇರೆ ಇಲಾಖೆಯವರು ಕೂಡ ಇರುತ್ತಾರೆ. ಯಾವ ರೀತಿಯಾಗಿ ಮಾಡಬೇಕು ಎನ್ನುವ ಬಗ್ಗೆ ಕೃಷಿ ಇಲಾಖೆಗೆ ಅಧಿಕಾರ ಇರುವುದಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ನಾನು ಇಷ್ಟಪಡುತ್ತೇನೆ. ಬರೀ ನೀರಿನಿಂದ ಭೂಮಿ ಹಾಳಾಗುತ್ತದೆಂದು ನಾನು ಹೇಳುವುದಿಲ್ಲ. ಗೊಬ್ಬರದ ದುರ್ಬಳಕೆಯಿಂದ ಕೂಡ ಭೂಮಿ ಹಾಳಾಗುತ್ತದೆ. ರೈತರು ಕೂಡ ಬರೀ ಯೂರಿಯಾವನ್ನು ತೆಗೆದುಕೊಂಡು ಹೋಗಿ ಭೂಮಿಗೆ ಹಾಕುತ್ತಾರೆ. ಅಥವಾ ಅಮೋನಿಯಾ ಸಲ್ಫೇಟ್ ಹಾಕುತ್ತಾರೆ. ಸಮತೋಲನವಾದ ಗೊಬ್ಬರವನ್ನು ಬಳಕೆಗೆ ತರುವುದಲ್ಲದೆ ಇವತ್ತು ಭೂಮಿಗೆ ಹಸಿರೆಲೆ ಗೊಬ್ಬರ ಹಾಕುವುದನ್ನು ನಿಷೇಧ ಮಾಡಿದ್ದಾರೆ. ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ದೊಡ್ಡ ದೊಡ್ಡ ಯೋಜನೆಗಳಲ್ಲಿ ಕೆಲವು ರೈತರು ಹೂಳು ಹೊಡೆದುಕೊಳ್ಳಬೇಕೆಂದರೆ ನಿಮ್ಮ ಇಲಾಖೆಯವರು ಅಡ್ಡಿಪಡಿಸುತ್ತಾರೆ. ಹಿಂದೆ ಇದರ ಬಗ್ಗೆ ನನ್ನ ಗಮನಕ್ಕೆ ಕೂಡ ಬಂದಿತ್ತು ಮಲಪ್ರಭಾ ಅಥವಾ ಘಟಪ್ರಭಾದಲ್ಲಿ ಇರಬಹುದು, ಕೆಲವು ರೈತರು ಮಣ್ಣು ಹೊಡೆದುಕೊಳ್ಳುತ್ತೇವೆಂದರೆ ಇಲಾಖೆಯವರು ಬೇಡವೆನ್ನುತ್ತಾರೆ ನೋಡಿ ಎಂದು ನನ್ನ ಗಮನಕ್ಕೆ ತಂದರು. ಆ ಮಣ್ಣು ತೆಗೆದುಕೊಂಡು ಹೋದರೆ, ನಿಮ್ಮ ಕೆರೆಯ ಅಂಗಳ ಹಾಳಾಗುತ್ತದೆ ಎಂದು ನೀವು ತಿಳಿದುಕೊಂಡಿರಬಹುದು, ಅಲ್ಲಿ ಹೆಚ್ಚು ನೀರು ನಿಲುತ್ತದೆ. ಇಂತಹದ್ದನ್ನು ಕೂಡ ತಾವು ನೋಡಬೇಕೆಂದು ತಮ್ಮ ಗಮನಕ್ಕೆ ತರುತ್ತೇನೆ. ಕನ್ನಂಬಾಡಿ ಅಣೆಕಟ್ಟಿನಿಂದ ಕೊನೆಯಲ್ಲಿ ನೀರು ಬರಬೇಕಾದರೆ 15-30 ದಿನಗಳು ಬೇಕಾಗುತ್ತದೆ ಇದರಿಂದಾಗಿ ರೈತರಿಗೆ ಸಮಸ್ಯೆ ಇದೆ ಎನ್ನುವುದನ್ನು ನಾನು ತಮಗೆ ಹೇಳಬೇಕಾಗುತ್ತದೆ. ಅನೇಕ ಬಲಾಢ್ಯರು ಎನಿಸಿಕೊಂಡವರ ಜಮೀನಿಗೆ ನೀರು ಹೋಗುತ್ತದೆ. ಸಣ್ಣ ಸಣ್ಣ ರೈತರಿಗೆ ನೀರಿನ ತೊಂದರೆಯಾಗಿರುವ ಪರಿಸ್ಥಿತಿ ಈಗಾಗಲೇ ಕಂಡು ಬಂದಿರುತ್ತದೆ. ಈ ರೀತಿ ನಿಮ್ಮ ಜಿಲ್ಲೆಯಲ್ಲಿ ಕೂಡ ಆಗಿರುವುದನ್ನು ನಾನು ನೋಡಿದ್ದೇನೆ, ಅಂತಹ ರೈತರಿಗೆ ರಕ್ಷಣೆ ಇರಬೇಕಾದದ್ದು ಅವಶ್ಯಕವಾಗಿದೆ. ಸಮಾಜದಲ್ಲಿ ದುರ್ಬಲ ವರ್ಗಕ್ಕೆ ಸಂಬಂಧಪಟ್ಟವರಿಗೂ ಕೂಡ ರಕ್ಷಣೆ ಇರಬೇಕು. ತಾವು ಅವರಿಗೆ ಯಾವ ರೀತಿಯಾಗಿ ರಕ್ಷಣೆಯನ್ನು ಕೊಡುತ್ತೀರಿ, ಪ್ರತಿ ಡಿಸ್ಟ್ರಿಬ್ಯೂಟರ್ಸ್‌ನಲ್ಲಿ ಈ ಸಮಸ್ಯೆ ಇರುತ್ತದೆ. ಸಣ್ಣ ಸಣ್ಣ ಕೆರೆಗಳು ಇರತಕ್ಕಂಥ ನಮ್ಮ ಭಾಗದಲ್ಲಿ ಕೂಡ ಇಂತಹ ಸಮಸ್ಯೆಗಳು ಇವೆ. ಅತೀ ದೊಡ್ಡದು ಎಂದರೆ ಒಂದು ಸಾವಿರ ಎಕರೆ ನೀರಾವರಿಯಾಗತಕ್ಕಂಥ ಹೊಸಕೋಟೆಯ ಕೆರೆ ಇರಬಹುದು. ಅಲ್ಲಿ ಕೂಡ ಕೆಳಗಡೆ ಇರತಕ್ಕಂಥ ಜಮೀನಿಗೆ ನೀರು ಹೋಗುವುದು ಬಹಳ ದುಸ್ತರವಾಗಿ, ಅಲ್ಲಿ ಜಗಳ, ಹೊಡೆದಾಟಗಳು ಸಾಕಷ್ಟು ಆಗುತ್ತವೆ. ಇದನ್ನು ತಾವು ಗಮನಿಸಬೇಕು, ದೊಡ್ಡ ಯೋಜನೆಯಲ್ಲಿರಬಹುದು, ಕನ್ನಂಬಾಡಿ ಅಥವಾ ಬೇರೆ ಅಚ್ಚುಕಟ್ಟು ಇರಬಹುದು, ಅಲ್ಲಿ ರೈತರಿಗೆ ರಕ್ಷಣೆಯಾಗಬೇಕು. ಸಣ್ಣ ಕೆರೆಯ ನೀರನ್ನು ಉಪಯೋಗಿಸುವ ದುರ್ಬಲವರ್ಗದವರ ರಕ್ಷಣೆ ಮಾಡುವುದು ಕೂಡ ಮುಖ್ಯವಾಗಿದೆ. ರಕ್ಷಣೆ ಒದಗಿಸುವ ವಿಚಾರದಲ್ಲಿ ಕೂಡ ಈ ಬಿಲ್‌ನಲ್ಲಿ ಏನು

ಇರುವುದಿಲ್ಲ. ಸಮಪಾಲಿನ ನೀರು ಪಡೆಯುವ ಹಕ್ಕು ಅವರಿಗೆ ಇದೆ, ಅವರು ಹಕ್ಕನ್ನು ಚಲಾಯಿಸಿ ನೀರನ್ನು ಬಳಸಿಕೊಳ್ಳಬೇಕಾದರೆ ಅವರಿಗೆ ರಕ್ಷಣೆ ಕೊಡಬೇಕಾದದ್ದು ಅತ್ಯಾವಶ್ಯಕವಾಗಿರುತ್ತದೆ. ಆಡಳಿತ ಮಂಡಳಿ ಹಾಗೂ ನಿಮ್ಮ ಕಾನೂನಿನ ಪ್ರಕಾರ ಅವರಿಗೆ ರಕ್ಷಣೆ ಕೊಡಬೇಕು ಎನ್ನುವುದನ್ನು ನಾನು ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಮಸೂದೆಯಿಂದ ಈಗಾಗಲೇ ಕೆಲವು ಕಡೆ ಸಂಘರ್ಷಗಳು ಪ್ರಾರಂಭವಾಗಿರುತ್ತವೆ. ಇದರಲ್ಲಿ ಏನು ಇರುವುದಿಲ್ಲ, ತಾವು ಇದನ್ನು ಮಂಡನೆ ಮಾಡುತ್ತಾ ಒಂದು ಮಾತನ್ನು ತಾವು ಹೇಳಿದಿರಿ, ಈ ಸಂಘಗಳು ರಾಜಕೀಯದಿಂದ ದೂರ ಇರಬೇಕು. ನಮ್ಮ ಅನುಭವದಿಂದ ಬಂದಿರುವ ಪ್ರಕಾರ ರಾಜಕೀಯ ಬಿಟ್ಟರೆ ಇದರಲ್ಲಿ ಬೇರೆ ಏನು ಇಲ್ಲ. ಕೆಲವು ಕಡೆ ಸಹಕಾರ ಸಂಘಗಳು ಪ್ರಾರಂಭವಾಗಿವೆ, ಈಗಾಗಲೇ ಕೆಲವು ಕಡೆ ಇದರಿಂದ ಯುದ್ಧಕಾಂಡಗಳು ನಡೆಯುತ್ತಿವೆ. ತಾವು ಎರಡು ದೂರುಗಳು ಮಾತ್ರ ಬಂದಿವೆ, ಅವು ಬೇರೆ ಬೇರೆ ಕಾರಣದಿಂದ ಬಂದ ದೂರುಗಳು, ಅದನ್ನು ತರಿಸಿ ಸ್ವಾಮಿ ಎಲ್ಲಿ ಏನು ನಡೆದಿದೆ ಗೊತ್ತಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಮಾನ್ಯ ಅಧ್ಯಕ್ಷರೆ, ಹೆಚ್ಚು ದೂರುಗಳು ಇರುವುದು ಮಾನ್ಯ ನೀರಾವರಿ ಸಚಿವರ ಜಿಲ್ಲೆಯಲ್ಲಿ, ನರಗುಂದ ತಾಲ್ಲೂಕಿನಲ್ಲಿ ಸಾಕಷ್ಟು ದೂರುಗಳು ಇವೆ. ಬೇರೆ ಜಿಲ್ಲೆಗೆ ಹೋಲಿಸಿದರೆ ನಿಮ್ಮ ಜಿಲ್ಲೆಯಲ್ಲಿ ಜಾಸ್ತಿ ಇರುವುದು. ರೆಜಿಸ್ಟ್ರೇಶನ್ ಯಾವ ರೀತಿಯಾಗಿ ಮಾಡಿಸಿದ್ದಾರೆ ಎನ್ನುವುದನ್ನು ತಾವು ತೆಗೆಸಿ ನೋಡಿ, ಅದನ್ನು ತಾವು ಮಾಡಿದ್ದೀರೆಂದು ನಾನು ಹೇಳುವುದಿಲ್ಲ, ಅದು ತಮ್ಮ ಗಮನಕ್ಕೆ ಬಂದಿರುವುದಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ (ಕೋಲಾರ) : ಮಾನ್ಯ ಉಪಾಧ್ಯಕ್ಷರೆ, ಹೊಸದಾಗಿ ಏನು ಸಹಕಾರ ಸಂಘಗಳನ್ನು ಮಾಡುತ್ತಿದ್ದಿರಿ, ಇದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಸಿ. ಬೈರೇಗೌಡರಿಗೆ ಗೊತ್ತಿದೆ. ಅವರ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಮದನಹಳ್ಳಿಯಲ್ಲಿ ಒಂದು ನೀರಾವರಿ ಸಹಕಾರ ಸಂಘವನ್ನು ಮಾಡುತ್ತಿದ್ದಾರೆ. ಆ ಸಹಕಾರ ಸಂಘವನ್ನು ಪ್ರಾರಂಭ ಮಾಡುತ್ತೇನೆಂದು ಯಾರಿಗೂ ಹೇಳದೆ ಕೋಲಾರದಲ್ಲಿ 60 ಜನರು ಕುಳಿತುಕೊಂಡು ಷೇರು ಹಣವನ್ನು ಕಲೆಕ್ಟ್ ಮಾಡಿಕೊಂಡು ಸೊಸೈಟಿಯನ್ನು ಮಾಡಿಕೊಂಡರು. ಇವತ್ತು ಸುಮಾರು 300 ಜನರು ಡೆಪ್ಯುಟಿ ರಿಜಿಸ್ಟ್ರಾರ್‌ರವರ ಹತ್ತಿರ ಹೋಗಿ ಘೇರಾವು ಮಾಡಿದ್ದಾರೆ. ಮಾನ್ಯ ಮಂತ್ರಿಗಳಲ್ಲಿ ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ ಇದನ್ನು ತಾವು ನಿಲ್ಲಿಸಬೇಕಾಗುತ್ತದೆ. ಇದನ್ನು ಪ್ರಾರಂಭ ಮಾಡಬೇಕಾದರೆ ನೇರವಾಗಿ ಎಲ್ಲಾ ಕಡೆ ಪಾಂಪ್ಲೇಟಾಗಬೇಕಾಗುತ್ತದೆ. ಇದಕ್ಕೆ ಯಾರು ಬೇಕಾದರೆ ಷೇರು ಹೋಲ್ಡರ್‌ಗಳು ಆಗಬಹುದು, ಈ ಸಹಕಾರ ಸಂಘಗಳು ಸೀಮಿತದಲ್ಲಿ ಹಿಡಿತದಲ್ಲಿ ಆದರೆ ಒಳ್ಳೆಯದು, ಇಲ್ಲದಿದ್ದರೆ ಅದು ಹಾಳಾಗುತ್ತದೆ. ಬೆಳಿಗ್ಗೆ ಆ ಊರಿನವರು ನನಗೆ ಫೋನ್ ಮಾಡಿದ್ದರು, ಮಾನ್ಯ ಸದಸ್ಯರಾದ ಶ್ರೀ ಬಚ್ಚೇಗೌಡರು ಸಹ ಅದನ್ನೇ ಹೇಳುತ್ತಿದ್ದಾರೆ. ಕೊಳೂರಿನಲ್ಲೂ ಸಹ ಅದೇ ರೀತಿಯಾಗಿತ್ತು, ಮೊನ್ನೆ ದಿನ ನನ್ನ ಕ್ಷೇತ್ರದಲ್ಲಿ ಡೆಪ್ಯುಟಿ ರಿಜಿಸ್ಟ್ರಾರ್‌ರವರ ಹತ್ತಿರ ಹೋಗಿ ದೊಡ್ಡ ಗಲಾಟೆಯಾಗಿದೆ. ಇದರ ಬಗ್ಗೆ ಬಹಳ ಮುಖ್ಯವಾದ ಒಂದು ಸುತ್ತೋಲೆಯನ್ನು ಕಳುಹಿಸಬೇಕು. ಇದರ ಬಗ್ಗೆ ಯಾವುದಾದರೂ ಒಂದು ಯಾರ್ಡ್‌ಸ್ಟಿಕನ್ನು ಮಾಡಬೇಕು. ಇರಿಗೇಷನ್ ಪ್ರಾಜೆಕ್ಟ್ ಅಲ್ಲ, ಇರಿಗೇಷನ್ ಸೊಸೈಟಿಗಳಿಗೆ, ಅಂದರೆ ಸಣ್ಣ ನೀರಾವರಿ ಸೊಸೈಟಿಗಳಿಗೆ ಈಗಾಗಲೇ ಅದಕ್ಕೆ ಒಂದು

ನಿರ್ದಿಷ್ಟವಾದ ನಿರ್ದೇಶನವನ್ನು ಕೊಡಬೇಕು. ಆ ಸೊಸೈಟಿ ಸಹಕಾರ ಸಂಘದ ಸದಸ್ಯರಾಗಬೇಕಾದರೆ, ಈ ರೀತಿಯಾಗಿರಬೇಕು, ಇದು ಎಲ್ಲ ಜನರಿಗೂ ಗೊತ್ತಾಗಬೇಕು. ಅಲ್ಲಿ ಹಲಗೆಯನ್ನು ಹೊಡೆಯುತ್ತೀರೋ ಅಥವಾ ಮೈಕನ್ನು ಇಟ್ಟುಕೊಂಡು ಹೇಳುತ್ತಿರೋ ಗೊತ್ತಿಲ್ಲ ಈ ನಿರ್ದೇಶನವನ್ನು ಕೊಟ್ಟರೆ ಮಾತ್ರ ಎಲ್ಲರ ಇನ್‌ವಾಲ್ವ್‌ಮೆಂಟಾಗುತ್ತದೆ. ಈಗ ಉದಾಹರಣೆಗೆ ಹೇಳುವುದಾದರೆ ನಮ್ಮ ಊರಿಗೆ ನನಗೆ ಬೇಕಾದವರಿಗೆ ನಾನು ಬರೆದುಕೊಡುತ್ತೇನೆ, ಯಾರು ಅರ್ಧ, ಮುಕ್ಕಾಲು ಎಕರೆ ಇರುವ ಬಡರೈತನಿಗೆ ನೀವು ಎಲ್ಲಿ ಸೊಸೈಟಿಯನ್ನು ಮಾಡುತ್ತೀರೆಂದು ಅವರಿಗೆ ಎಲ್ಲಿ ಸದಸ್ಯರಾಗಬೇಕೆಂಬುದು ಗೊತ್ತಾಗುವುದಿಲ್ಲ. ಇದನ್ನು ಯಾವ ರೀತಿ ಮಾಡಬೇಕೆಂಬುದನ್ನು ಕೂಡ ತಾವು ಯೋಚನೆಯನ್ನು ಮಾಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ವಿ. ಕೃಷ್ಣಪ್ಪ (ದೊಡ್ಡಬಳ್ಳಾಪುರ) : ಮಾನ್ಯ ಸದಸ್ಯರಾದ ಶ್ರೀ ಶ್ರೀನಿವಾಸಗೌಡರು ಹೇಳುತ್ತಿರುವುದನ್ನು ನಾನು ಕೇಳುತ್ತಿದ್ದೇನೆ. ಇದನ್ನು ಪ್ರಾರಂಭ ಮಾಡುತ್ತೇವೆಂದು ಎಲ್ಲೂ ಕೂಡ ಪ್ರಚಾರ ಮಾಡಲಿಲ್ಲ. ಇದನ್ನು ಮನೆಯಲ್ಲೇ ಕುಳಿತುಕೊಂಡು ಸಾಧಾರಣವಾಗಿ ರಿಜಿಸ್ಟರ್ ಮಾಡಿಕೊಂಡಿದ್ದಾರೆಯೇ ವಿನಃ ಇದನ್ನು ಪ್ರಚಾರ ಮಾಡಿ ಎಲ್ಲೂ ಕೂಡ ಮಾಡಲಿಲ್ಲ. ಅವರವರಿಗೆ ಬೇಕಾದವರನ್ನು ಅಚ್ಚುಕಟ್ಟುದಾರರನ್ನಾಗಿ ಮಾಡಬಹುದು ಕೆಲವು ಅಚ್ಚುಕಟ್ಟುದಾರರು ಇಲ್ಲದೆ ಇರುವವರನ್ನು ಮಾಡಬಹುದೆಂದು ಎಂದು ಕಾನೂನಿನಲ್ಲಿ ಮಾಡಿದ್ದಾರೆ. ಅಚ್ಚುಕಟ್ಟುದಾರರು ಎಷ್ಟು ಜನರು ಆಗಿದ್ದಾರೆ, ಅಚ್ಚುಕಟ್ಟುದಾರರಲ್ಲದವರು ಎಷ್ಟು ಜನರು ಆಗಿದ್ದಾರೆಂಬ ಮಾಹಿತಿಯನ್ನು ಬೇಕಾದರೆ ನೀವು ತರಿಸಿಕೊಂಡು ನೋಡಬಹುದು. ಈ ಸೊಸೈಟಿಗಳು ರಾಜಕೀಯದಿಂದ ಮಾಡಿರಬಹುದೇ ವಿನಃ ಪುನಃ ಇವೆಲ್ಲ ಗಬ್ಬು ಹಿಡಿಯುತ್ತವೆ. ಇದರಲ್ಲಿ ರಾಜಕೀಯ ಮಾಡುವುದಕ್ಕೋಸ್ಕರವೇ ಈ ಸೊಸೈಟಿಯನ್ನು ಮಾಡಿದಂತಾಗುತ್ತದೆ. ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಆಫೀಸ್‌ನಲ್ಲಿ ಕುಳಿತುಕೊಂಡು ಇದನ್ನು ರಿಜಿಸ್ಟರ್ ಮಾಡಿದ್ದಾರೆ. ಇದನ್ನು ತಾವು ದಯವಿಟ್ಟು ಗಮನಿಸಬೇಕಾಗುತ್ತದೆ.

ಉಪಾಧ್ಯಕ್ಷರು : ಮಾನ್ಯ ಬೈರೇಗೌಡರೆ, ತಾವು ಈಗಾಗಲೇ 50 ನಿಮಿಷಗಳ ಕಾಲ ಮಾತನಾಡಿದ್ದೀರಿ ಇದರ ಬಗ್ಗೆ ಸಂಕ್ಷಿಪ್ತವಾಗಿ ಮಾತನಾಡಿ ಮುಗಿಸಿ. ಬೇರೆಯವರಿಗೂ ಅವಕಾಶವನ್ನು ಕೊಡಬೇಕು. ಬೇಗ ಮುಗಿಸಿ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಸದಸ್ಯರಾದ ಶ್ರೀ ಬೈರೇಗೌಡರು ಮಾತನ್ನು ಪ್ರಾರಂಭ ಮಾಡುವಾಗ ಕೋಲಾರದಲ್ಲಿ ನೀರು 800 ಅಡಿ ಕೆಳಗಡೆ ಹೋಗಿದೆ ಎಂದು ಹೇಳಿದರು. ಈಗ ಅಲ್ಲಿ 800 ಅಡಿಯಿಂದ ಮೇಲಕ್ಕೆ ಬರುತ್ತಿದೆ. ಈಗ ನೀರಿನ ಬಗ್ಗೆ ಮಾತನಾಡುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ನನ್ನದು ಒಬ್ಬನದೆ ಅಲ್ಲ ಅನುಭವ, ನಾನು ತಿಳುವಳಿಕೆಯಿಂದ ಕೆಲವು ವಿಚಾರಗಳನ್ನು ಮಾತನಾಡಿದರೆ ಅವು ಸತ್ಯಾಂಶ, ವಾಸ್ತವಾಂಶದಿಂದ ಕೂಡಿರುತ್ತದೆ. ನನ್ನ ಅಂತಸ್ಥಿಗೆ ಕಡಿಮೆ ಎಂದು ತಿಳಿದುಕೊಂಡು ನಾನು ಮಾತನಾಡುವುದಕ್ಕೆ ಹೋಗುತ್ತಿಲ್ಲ, ಅದನ್ನು ತಾವು ತಿಳಿದುಕೊಳ್ಳಿ. ನನ್ನ ಅಂತಸ್ಥಿಗೆ ತಕ್ಕ ಹಾಗೆ ಇಲ್ಲಿ ಏನು ನಡೆಯುತ್ತಿದೆ ಎಂದು ತಿಳಿದುಕೊಂಡು ಸದನದಲ್ಲಿ ಮಾತನಾಡಿದರೆ ಅದು ನನಗೆ ಅವಮಾನವೆಂದು

ತಿಳಿದುಕೊಂಡು ನಾನು ಮಾತನಾಡುವುದಕ್ಕೆ ಹೋಗುವುದಿಲ್ಲವೆಂದು ತಾವು ತಿಳಿದುಕೊಳ್ಳಬೇಕು. ಅಂತಹ ಹೀನಾಯವಾದಂತಹ ರೀತಿಯಲ್ಲಿ ಈ ಸಹಕಾರ ಸಂಘಗಳನ್ನು ತಾವು ವ್ಯವಸ್ಥೆ ಮಾಡತಕ್ಕಂಥದಕ್ಕೆ ಪ್ರಯತ್ನಪಟ್ಟಿದ್ದೀರೆಂದು ನಾನು ಸೂಕ್ಷ್ಮವಾಗಿ ಈಗ ಯುದ್ಧಕಾಂಡ ಪ್ರಾರಂಭವಾಗಿದೆಯೆಂದು ಹೇಳಿದ್ದೇನೆ. ಪ್ರತಿ ಸಹಕಾರ ಸಂಘದಲ್ಲೂ ಕೂಡ ಏನೋ ಆಕಸ್ಮಾತಾಗಿ ಇಲ್ಲೊಂದು, ಅಲ್ಲೊಂದು ಎಕ್ಸೆಪ್ಷನ್ ಇರಬಹುದೆಂದು ನಮ್ಮ ಸ್ನೇಹಿತರು ಹೇಳಿದರು. ಪ್ರತಿ ಸಹಕಾರ ಸಂಘದಲ್ಲೂ ಕೂಡ ಇವತ್ತು ಯುದ್ಧಕಾಂಡವೇ ಪ್ರಾರಂಭವಾಗಿದೆ, ಇದರ ಬಗ್ಗೆ ಏನು ಸಮಾಚಾರವೆಂದು ನಾನು ಕೇಳಿದೆ, ಇಷ್ಟೆಲ್ಲಾ ಅವರುಗಳು ಚಟುವಟಿಕೆಯಿಂದ ಕೆಲಸವನ್ನು ಪ್ರಾರಂಭ ಮಾಡುತ್ತಿದ್ದಾರಲ್ಲ ಏನು ಎಂದು ಕೇಳಿದಾಗ ಅದಕ್ಕೆ ನಮ್ಮ ಸ್ನೇಹಿತರುಗಳು ವಿಶ್ವಬ್ಯಾಂಕಿನಿಂದ 1000 ಕೋಟಿ ರೂಪಾಯಿಗಳು ಬರುತ್ತದೆ ಹೇಳಿದರು. ಕೆರೆಗಳನ್ನು ಅಭಿವೃದ್ಧಿಪಡಿಸುವುದಕ್ಕೆ 1200 ಕೋಟಿ ರೂಪಾಯಿಗಳು ಬರುತ್ತದೆ, 800 ಕೋಟಿ ರೂಪಾಯಿಗಳು ಬರುತ್ತದೆಂದು ದಿವಸ ಪತ್ರಿಕೆಗಳಲ್ಲಿ ಬಂದಿರುವುದನ್ನು ಓದಿದ್ದಾರೆ. ಈ ಎಲ್ಲಾ ಹಣವು ನಮ್ಮ ಕೈಗೆ ಸಿಗುತ್ತದೆ, ಸಾವಿರಾರು ಕೋಟಿ ರೂಪಾಯಿಗಳನ್ನು ಇವತ್ತಿನದಿವಸ ಕೆರೆಗಳಲ್ಲಿ ಹೂಳೆತ್ತುವುದಕ್ಕೆ ಅದನ್ನು ಉದ್ಧಾರ ಮಾಡುವುದಕ್ಕಾಗಿ ಸಿಗುತ್ತದೆಂದು ಇರತ್ತು ಇಷ್ಟೆಲ್ಲಾ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆಂದು ಹೇಳಿದರು ಇದು ಅಲ್ಲಿ ನಡೆಯುತ್ತಿರುವ ವಾಸ್ತವಾಂಶವಾಗಿದೆ. ಮಾನ್ಯ ಉಪಾಧ್ಯಕ್ಷರೆ, ವಿಶ್ವಬ್ಯಾಂಕಿನಿಂದ ತರತಕ್ಕಂತಹ ಹಣವಿದೆಯಲ್ಲಾ ಆ ಹಣವನ್ನು ರಾಜ್ಯದ ಜನ ಬೆವರನ್ನು ಸುರಿಸಿ ವಾಪಸ್ಸು ಕೊಡಬೇಕಾಗುತ್ತದೆ, ಇದನ್ನು ತಾವು ಸ್ವಲ್ಪ ದಯವಿಟ್ಟು ತಿಳಿದುಕೊಳ್ಳಬೇಕು. ಯಾರೋ 4-5 ಜನ ಕಳ್ಳಕಾಕರಿಗೋಸ್ಕರ ಇದನ್ನು ವ್ಯವಸ್ಥೆ ಮಾಡುವುದಕ್ಕೆ ಹೋಗಬೇಡಿ, ಇದರಿಂದ ಮುಂದೆ ಬಹಳ ಅನಾಹುತವಾಗುತ್ತದೆ. ಕೆರೆಯನ್ನು ಅಭಿವೃದ್ಧಿಪಡಿಸುವುದಕ್ಕೆ ಬದಲಾಗಿ ಇವತ್ತು ಕೆಲವರನ್ನು ಅಭಿವೃದ್ಧಿಪಡಿಸುವುದಕ್ಕೆ ಪ್ರಯತ್ನ ನಡೆಯುತ್ತಿದೆ. ಈಗಾಗಲೇ ಅದಕ್ಕೆ ಬೀಜ ಬಿದ್ದಿದೆ, ಅದು ಒಳ್ಳೆಯ ಬಿತ್ತನೆಯಾಗುತ್ತಿದೆ, ಫಲವತ್ತಾದಂತಹ ಭೂಮಿಯಲ್ಲಿ ಬಿತ್ತನೆಯಾಗಬೇಕಾದಂತಹ ಕೆಲಸ ಪ್ರಾರಂಭವಾಗಿದೆ. ಅಲ್ಲಿ ಕೆರೆಗಳು ಅಭಿವೃದ್ಧಿಯಾದರೆ ನನಗಂತೂ ಬಹಳ ಸಂತೋಷವಾಗುತ್ತದೆ, ಇದರಲ್ಲಿ ನಾನು ಬಹಳ ಶ್ರದ್ಧೆಯನ್ನು ವಹಿಸಿರತಕ್ಕಂತವನು ಅಲ್ಲಿ ಕರೆಯು ಅಭಿವೃದ್ಧಿಯಾಗದಿದ್ದರೆ ನನಗಂತೂ ಮೋಕ್ಷ ಇಲ್ಲವೇ ಇಲ್ಲ, ಕುಡಿಯುವುದಕ್ಕೆ ನೀರು ಸಿಗುವುದಿಲ್ಲ. ಈ ರಾಜ್ಯದ ಸುಮಾರು ಶೇಕಡ 50-55ರಷ್ಟು ಭೂಮಿಯು ಮಳೆಯ ಆಶ್ರಯದ ಭೂಮಿಯಾಗಿರುತ್ತದೆ, ಇವು ಕೆರೆಗಳ ಆಧಾರವಾಗಿರುತ್ತದೆ. ಈ ಕೆರೆಗಳೆ ಇಲ್ಲದೆ ಹೋದರೆ ನಮ್ಮ ಜೀವನವೆ ಮುಗಿದುಹೋಗುತ್ತದೆ. ಇವತ್ತಿನದಿವಸ ಸಾವಿರಾರು ಕೋಟಿ ರೂಪಾಯಿಗಳು ಸಿಗುತ್ತದೆಂದು ಬಕಪಕ್ಷಿಗಳಂತೆ ಅವರುಗಳು ಕಾಯುತ್ತಿದ್ದಾರೆ. ಇದಕ್ಕೆ ತಾವು ಅವಕಾಶವನ್ನು ಮಾಡಿಕೊಡುವುದಕ್ಕೆ ಹೋಗಬೇಡಿ. ಇದು ಇವತ್ತಿನ ದಿವಸ ಪ್ರಾರಂಭವಾಗಿ ನಡೆಯುತ್ತಾ ಹೋಗಿದೆ. ಆ ಹೊಲಸುಗಳನ್ನು ನಾನು ಇಲ್ಲಿ ಬಿಚ್ಚುವುದಕ್ಕೆ ತಯಾರಿಲ್ಲ ಅದನ್ನು ಹೇಳಿದರೆ ನನ್ನ ಘನತೆಗೆ, ಗೌರವಕ್ಕೆ ಕುಂದು ಬರುತ್ತದೆ ಎನ್ನುವ ಕಾರಣಕ್ಕೋಸ್ಕರ ಆ ಹೊಲಸನ್ನು ನಾನು ಬಿಚ್ಚುತ್ತಿಲ್ಲ, ತಾವು ತಿಳಿದುಕೊಳ್ಳಿ ಎಂದು ಹೇಳಿದ್ದೇನೆ. ಇದಕ್ಕಿಂತ ಕಠಿಣವಾದ ಪದಗಳನ್ನು ಬಳಸುವುದಕ್ಕೆ ಹೋಗುವುದಿಲ್ಲ. ಈ ಸೂಕ್ಷ್ಮತೆಯನ್ನು ಅರಿತು ಇವತ್ತು ಆಗಿರತಕ್ಕಂತಹ ಅನಾಹುತ ಏನಿದೆ, ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನವನ್ನು ಮಾಡಬೇಕು. ಇಲ್ಲದೆ ಹೋದರೆ ಅದರ ಪ್ರತಿಫಲವನ್ನು ಅನುಭವಿಸಬೇಕಾಗುತ್ತದೆ. ಇದರ ಬಗ್ಗೆ ನಾನು ಎಲ್ಲವನ್ನು

ಬಿಚ್ಚಿಹೇಳುವುದಕ್ಕೆ ಹೋಗುವುದಿಲ್ಲ, ಅದಕ್ಕೆ ಕಾರಣವನ್ನು ಸಹ ಇವತ್ತಿನ ದಿವಸ ಹೇಳಿದ್ದೇನೆ. ಎಷ್ಟು ಕಡೆ ಸೊಸೈಟಿಗಳನ್ನು ಮಾಡಿದ್ದಾರೆಂಬುದರ ಬಗ್ಗೆ ಲೆಕ್ಕವನ್ನು ತರಿಸಿ ನೋಡಿ. ಗ್ರಾಮಸಭೆಗಳನ್ನು ಮಾಡಬೇಕೆಂಬುದು ಇದೆ. ಒಂದು ಮನೆಯನ್ನು ಕಟ್ಟುವುದಕ್ಕೆ 20 ಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ ಗ್ರಾಮಸಭೆ ಏತಕ್ಕಾಗಿ ಬೇಕೆಂದು ಪೈಪೋಟಿ ನಡೆಯುತ್ತಿದೆ. ಈ ರೀತಿಯಾಗಿ ಒಂದು ಸಹಕಾರ ಸಂಘವನ್ನು ಸ್ಥಾಪನೆ ಮಾಡುವುದರಲ್ಲಿ ಗ್ರಾಮಸಭೆಯು ಇಲ್ಲವೆಂದು ನಾಲ್ಕು ಜನರು ಪೋಲಿ ಹುಡುಗರು ಬೆಳಿಗ್ಗೆ-ಸಾಯಂಕಾಲ ಸಾರಾಯಿ ಅಂಗಡಿಗಳಲ್ಲಿ ಬಿದ್ದಿರತಕ್ಕಂತವರು ಹೋಗಿ ಒಂದು ಸಹಕಾರ ಸಂಘವನ್ನು ಸ್ಥಾಪನೆಯನ್ನು ಮಾಡುತ್ತಾರೋ, ಇದು ರೈತರ ಕೆರೆ ಅಭಿವೃದ್ಧಿ ಸಹಕಾರ ಸಂಘವನ್ನು ಮಾಡುತ್ತಿದ್ದೀರೋ ಇಲ್ಲ ಸಾರಾಯಿ ಕುಡುಕರ ಸಹಕಾರ ಸಂಘವನ್ನು ಮಾಡುತ್ತಿದ್ದೀರೋ ಎನ್ನುವ ಬಗ್ಗೆ ತಾವು ಯೋಚನೆಯನ್ನು ಮಾಡಬೇಕಾಗುತ್ತದೆ. ಇವತ್ತು ನಾನು ನಿಮಗೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ : ಇವರು ನೀರು ಬಳಕೆದಾರರ ಸಹಕಾರ ಸಂಘವನ್ನು ಮಾಡುವುದಕ್ಕೆ ಹೊರಟಿರುವುದು, ಆದರೆ ಅಲ್ಲಿ ವಾಸ್ತವಿಕವಾಗಿ ಆಗುತ್ತಿರುವುದು ಅಸಹಕಾರ ಸಂಘ.

ಶ್ರೀ ಎಂ. ಮಹದೇವ (ರೇಷ್ಮೆ ಸಚಿವರು) : ಮಾನ್ಯ ಸದಸ್ಯರಾದ ಅರಗ ಜ್ಞಾನೇಂದ್ರರವರೆ, ಇದು ಪ್ರಾರಂಭವಾಗುವುದಕ್ಕೆ ಮುಂಚೆ ಹೀಗೆ ಎಂದು ಹೇಗೆ ಹೇಳುತ್ತೀರಿ?

ಶ್ರೀ ಅರಗ ಜ್ಞಾನೇಂದ್ರ : ಇದು ನಮ್ಮ ಹಳ್ಳಿಗಳಲ್ಲಿ ಆಗುತ್ತಿದೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ಈ ಸಾರಾಯಿ ಸಹಕಾರ ಸಂಘಗಳು ನಮಗೆ ಬೇಕಾಗಿಲ್ಲ, ಅದರ ಬಗ್ಗೆ ನಾನು ನಿಮಗೆ ನೇರವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದಕ್ಕಿಂತ ಮುಂದಕ್ಕೆ ಮಾತನಾಡುವುದಕ್ಕೆ ಹೊರಟರೆ ನನ್ನ ಘನತೆಗೆ ಗೌರವಕ್ಕೆ ಕುಂದುಬರುವಂತೆ ಮಾಡಿಕೊಳ್ಳುವುದು ಸಾಧ್ಯವಿಲ್ಲ. ನಾನು ಹೇಳಿರತಕ್ಕಂತಹ ಕೆಲವು ವಿಚಾರಗಳು ಏನಿದೆ, ಮೊದಲನೆಯದಾಗಿ ಟೇಲ್ ಎಂಡರ್ಸ್‌ಗೆ ಸಮಾಜದಲ್ಲಿರುವಂತಹ ದುರ್ಬಲವರ್ಗದವರು ಯಾರಿದ್ದಾರೆ ಇವರಿಗೆ ರಕ್ಷಣೆಯು ಸಿಗಬೇಕಾಗಿರುವಂತಹದ್ದು ಅತ್ಯಾವಶ್ಯಕವಾಗಿದೆ. ಈ ನೀರು ಬಳಕೆದಾರರ ಸಹಕಾರ ಸಂಘಗಳನ್ನು ಬಿಟ್ಟು ಸಾರಾಯಿ ಬಳಕೆದಾರರ ಸಹಕಾರ ಸಂಘಗಳನ್ನು ದಯವಿಟ್ಟು ಮಾಡುವುದಕ್ಕೆ ಅವಕಾಶವನ್ನು ಕೊಡಬೇಡಿ. ಈ ಸಂಘಗಳು ನಿಜವಾಗಿಯೂ ರೈತರಿಗೆ ರಕ್ಷಣೆಯನ್ನು ಕೊಡುವಂತದ್ದಾಗಿರಬೇಕು, ಇವತ್ತು ನಾವು ಕೆರೆಗಳನ್ನು ಅಭಿವೃದ್ಧಿಪಡಿಸುತ್ತೇನೆಂದು ನೇರವಾಗಿ ದೃಷ್ಟಿಯನ್ನಿಟ್ಟುಕೊಂಡು ಮಾಡಬೇಕಾಗಿರತಕ್ಕಂತಹ ಆ ಸಹಕಾರ ಸಂಘಗಳು ಆದರೆ ನಾನಂತೂ ಎಲ್ಲರಿಗಿಂತ ಹೆಚ್ಚಿಗೆ ಸಂತೋಷವನ್ನುಪಡುತ್ತೇನೆಂದು ಹೇಳಿ, ಮಾನ್ಯ ಉಪಾಧ್ಯಕ್ಷರೆ, ನನಗೆ ಉದಾರವಾಗಿ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೈ.ಕೆ. ರಾಮಯ್ಯ (ಹುಲಿಯೂರುದುರ್ಗ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸ್ನೇಹಿತರಾದ ಶ್ರೀ ಸಿ. ಬೈರೇಗೌಡರು ಈಗಾಗಲೇ ಭಾಷಣವನ್ನು ಮಾಡಿದ್ದಾರೆ. ನಾನು ಮನಸ್ಸಿಲ್ಲದೆ ಒಂದೇ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಉಪಾಧ್ಯಕ್ಷರು : ಇವತ್ತು ನಾನು ಎಷ್ಟು ಹೊತ್ತಾದರೂ ಪರವಾಗಿಲ್ಲ ನಾನು ಕುಳಿತುಕೊಳ್ಳುತ್ತೇನೆ. ಇವತ್ತು ಈ ಬಿಲ್ಲಿನ ಬಗ್ಗೆ ಮಾತನಾಡತಕ್ಕಂಥ ಸದಸ್ಯರುಗಳು ತಮ್ಮ ಭಾಷಣವನ್ನು ಮುಗಿಸಲೇಬೇಕು.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ : ಮಾನ್ಯ ಉಪಾಧ್ಯಕ್ಷರೆ, ನಾನು ತಮಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಬಿಲ್ಲು ಬಹಳ ಮುಖ್ಯವಾಗಿರತಕ್ಕಂಥದ್ದು, ತಾವು ಈ ಬಿಲ್ಲಿನ ಚರ್ಚೆ ಇವತ್ತೇ ಮುಗಿಸುತ್ತೇವೆಂದು ಹೇಳುತ್ತಿದ್ದೀರಿ, ಯಾವಾಗಲು ನೀವು ಬಿಲ್ಲನ್ನು ಸದಸ್ಯರಿಗೆ ಒದಗಿಸುವಂತದ್ದು ಪದ್ಧತಿ ಇತ್ತು. ಇಲ್ಲಿ ಅಸೆಂಬ್ಲಿ ಹಾಲ್‌ನಲ್ಲಿ ತಂದು ಇದನ್ನು ಕೊಟ್ಟು ಇದರ ಬಗ್ಗೆ ಸಮಗ್ರವಾಗಿ ಯೋಚನೆ ಮಾಡುವುದಕ್ಕೆ ಅವಕಾಶವನ್ನು ಕೊಡದಂತಹ ರೀತಿಯಲ್ಲಿ ಆಗಿದೆ. ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ಗೌರವಾನ್ವಿತ ಸದಸ್ಯರಿಗೆ ಇದು ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಈ ಬಿಲ್ಲನ್ನು ಕಳೆದ ತಿಂಗಳು 31ನೇ ತಾರೀಖಿನ ದಿವಸ ಸದನದಲ್ಲಿ ಮಂಡಿಸಿದ್ದೇನೆ. ಇದಾದನಂತರ ಮೊನ್ನೆ ದಿನ ಶುಕ್ರವಾರ ಇದರ ಬಗ್ಗೆ ಈಗಾಗಲೇ ಚರ್ಚೆಯು ಪ್ರಾರಂಭವಾಗಿದೆ. 2 ಗಂಟೆಗಳ ಕಾಲ ಚರ್ಚೆಯು ಆಗಿ ನಂತರ ಮತ್ತೆ ಚರ್ಚೆಯನ್ನು ಮುಂದುವರಿಸಿದ್ದಾಗಿದೆ, ಇವತ್ತಿನ ದಿವಸ ನಡೆಯುತ್ತಿರುವುದು 2ನೇ ದಿವಸದ ಚರ್ಚೆಯಾಗಿದೆ. ಆದ್ದರಿಂದ ನಾವು ಇದನ್ನು ಇವತ್ತೆ ಕೊಟ್ಟಿದ್ದೇವೆಂದು ದಯಮಾಡಿ ತಿಳಿದುಕೊಳ್ಳಬೇಡಿ. ನಾನು ಇದನ್ನು ಸದನದಲ್ಲಿ ಮಂಡನೆ ಮಾಡಿರುವ ದಿವಸ ಇದು ಎಲ್ಲರಿಗೂ ಬಂದಿರುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ : ಮಾನ್ಯ ಉಪಾಧ್ಯಕ್ಷರೇ ಇವತ್ತೆ ಇದನ್ನು ಮುಗಿಸಬೇಕೆಂದರೆ ನಾವು ಮಾತನಾಡುವುದಕ್ಕೆ ರೆಡಿ ಇದ್ದೇವೆ. ನಮ್ಮ ಶಾಸಕಾಂಗ ಪಕ್ಷದ ಸಭೆ ಇದೆ. ನಾವು ಅಲ್ಲಿಗೆ ಹೋಗಬೇಕಾಗಿರುವುದರಿಂದ ಇದನ್ನು ನಾಳೆಗೆ ತೆಗೆದುಕೊಂಡರೆ ನಾವು ಆ ಸಭೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಪಿ.ಟಿ. ಪರಮೇಶ್ವರ ನಾಯಕ್ : ಮಾನ್ಯ ಉಪಾಧ್ಯಕ್ಷರೇ, ಮೊನ್ನೆ ಶುಕ್ರವಾರ ಈ ಮಸೂದೆಯನ್ನು ಸೋಮವಾರ ಪಾಸ್ ಮಾಡಿಕೊಡುತ್ತೇವೆಂದು ಎಲ್ಲರೂ ಹೇಳಿದ್ದಾರೆ. ದಯವಿಟ್ಟು ಇವತ್ತು ಈ ಮಸೂದೆಯನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ : ಈ ಬಿಲ್ಲಿನ ಮೇಲೆ ಬಹಳಷ್ಟು ಬೆಳಕು ಚೆಲ್ಲುವುದು ಇದೆ. ನಾವು ಪಾಸ್ ಮಾಡುವುದಕ್ಕೆ ರೆಡಿ ಇದ್ದೇವೆ. ನಮ್ಮದು ಶಾಸಕಾಂಗದ ಪಕ್ಷದ ಸಭೆ ಇರುವುದರಿಂದ ನಮ್ಮ ಚೀಫ್ ವಿಪ್‌ರವರು ನಮಗೆ ಪತ್ರ ಕೊಟ್ಟಿದ್ದಾರೆ. ನಾವು ಅಲ್ಲಿಗೆ ಹೋಗಬೇಕು. ನಾಳೆ ನಾವು ಮಾತನಾಡುವುದಕ್ಕೆ ಸ್ವಲ್ಪ ಅವಕಾಶ ಸಿಗುತ್ತದೆ.

ಶ್ರೀ ಹೆಚ್.ಕೆ. ಪಾಟೀಲ್ : ಸಹಕಾರಿ ಕ್ಷೇತ್ರದಲ್ಲಿ ಅನುಭವವಿರತಕ್ಕ ಮಾನ್ಯ ಎಸ್.ಎಸ್. ಪಾಟೀಲ್‌ರವರು ಮಾತನಾಡಿದರೆ ನಾವು ಎಲ್ಲರೂ ಒಪ್ಪಿಕೊಂಡ ಹಾಗೆ ಆಗುತ್ತದೆ. ಅವರ ಮೂಲಕ ಚರ್ಚೆ ಮುಗಿಸಿ ನಾವು ಏನು ಹೇಳಬೇಕೋ ಹೇಳಿ ಪ್ರಕ್ರಿಯೆಯನ್ನು ಮುಗಿಸೋಣ.

ಶ್ರೀ ಸಿ. ಬೈರೇಗೌಡ : ಬರೀ ಗದಗಿನವರು ಮಾತನಾಡಿದರೆ ಸಾಕೆ?

ಶ್ರೀ ವಿ. ಕೃಷ್ಣಪ್ಪ : ಮಾನ್ಯ ಉಪಾಧ್ಯಕ್ಷರೇ, ನೀವು ದಯವಿಟ್ಟು ಚರ್ಚೆಗೆ ಅವಕಾಶ ಕೊಡಿ. ಚರ್ಚೆ ಮಾಡಲಿ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ಇದರ ಸಾಧಕಬಾಧಕಗಳ ಬಗ್ಗೆ ಏನು ಸೇರಿಸಬೇಕೆಂಬುದರ ಬಗ್ಗೆ ಪಕ್ಷಾತೀತವಾಗಿ ನಾವೆಲ್ಲರೂ ಕೂಡ ಗಹನವಾಗಿ ಚಿಂತನೆ ಮಾಡುವ ಅವಶ್ಯಕತೆಯಿದೆ. ಇದು ಹೊಸ ಪದ್ಧತಿ. ಇದು ಒಳ್ಳೆಯದು ಇದೆ. ಒಂದಿಷ್ಟು ಕೆಲವು ವಿಚಾರಗಳನ್ನು ಸಚಿವರ ಗಮನಕ್ಕೆ ತರಬೇಕಾಗುತ್ತದೆ. ಹಳ್ಳಿಗಳಲ್ಲಿ ಹೊಡೆದಾಟವಾಗುವುದು ಬೇಡ. ಹಳ್ಳಿಗಳಲ್ಲಿ ಒಳ್ಳೆಯ ಕಾರ್ಯಗಳನ್ನು ಮಾಡುವುದಕ್ಕೆ ಹೋಗಿ ಅಲ್ಲಿ ಅಶಾಂತಿಯನ್ನು ತರತಕ್ಕ ಕಾರ್ಯವಾಗಬಾರದು. ಅದರ ಬಗ್ಗೆ ವಿಸ್ತಾರವಾಗಿ ಚರ್ಚೆಯಾಗುವ ಅವಶ್ಯಕತೆಯಿದೆ. ಇವತ್ತು ಚರ್ಚೆ ಮುಗಿಯದಿದ್ದರೆ ನಾಳೆ ಪಾಸ್ ಮಾಡುವುದಕ್ಕೆ ಅವಕಾಶವಿದೆ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಏಳು ಗಂಟೆಯವರೆಗೆ ಚರ್ಚೆ ಮಾಡೋಣ. ಎಲ್ಲ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಕೊಡುವುದು ಮುಗಿದರೆ ಅಥವಾ ಏಳು ಗಂಟೆಯ ನಂತರ ಚರ್ಚೆ ಮುಗಯಲಿಲ್ಲವೆಂದರೆ ತಾವೇನು ನಿರ್ಣಯ ತೆಗೆದುಕೊಳ್ಳುತ್ತಿರೋ ಅದಕ್ಕೆ ನಾವು ಬದ್ಧರಾಗಿದ್ದೇವೆ.

ಶ್ರೀ ಬಿ.ಎನ್. ಬಚ್ಚೇಗೌಡ : 6 ಗಂಟೆಗೆ ನಮ್ಮ ಪಕ್ಷದ ಶಾಸಕಾಂಗದ ಸಭೆ ಇದೆ.

ಶ್ರೀ ಸಿ. ಎಸ್. ನಾಡಗೌಡ : ಮಾನ್ಯ ಮಂತ್ರಿಗಳು ಈ ಬಿಲ್ಲನ್ನು ಮಂಡಿಸುವಾಗ ಹೇಳಿದ್ದಾರೆ, ಇದರಲ್ಲಿ ಏನಾದರೂ ನ್ಯೂನ್ಯತೆಗಳಿದ್ದರೆ ಅವು ಕಂಡುಬಂದರೆ ಡ್ರಾಫ್ಟ್ ರೂಲ್ಸ್ ಮಾಡುವಾಗ ಪುನಃ ವಿರೋಧಪಕ್ಷದವರ ಜೊತೆ ಚರ್ಚೆ ಮಾಡಿಕೊಂಡು ಅದಕ್ಕೆ ಏನಾದರೂ ತಿದ್ದುಪಡಿ ತರುವಂತಹ ಸಂದರ್ಭವಿದ್ದರೆ ತರುತ್ತೇವೆ ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ. ಇದನ್ನು ಪಾಸ್ ಮಾಡಿಕೊಟ್ಟರೆ ಒಳ್ಳೆಯದು. ಇದು ನಾಲ್ಕು ದಿವಸಗಳಿಂದ ಚರ್ಚೆ ನಡೆಯುತ್ತಿದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಈ ಬಿಲ್ಲಿನ ಬಗ್ಗೆ ಯಾರದೂ ವಿರೋಧವಿಲ್ಲ. ಬಹಳ ಒಳ್ಳೆಯ ಬಿಲ್ಲನ್ನು ತಂದಿದ್ದಾರೆ. ಇದನ್ನು ಸರ್ವಾನುಮತದಿಂದ ಪಾಸ್ ಮಾಡೋಣ. ಆದರೆ ಕೆಲವು ಸಲಹೆಗಳನ್ನು ಮಾಡಬೇಕಾಗುತ್ತದೆ. ನಾನು ಮಾತನಾಡುವುದಕ್ಕೆ ಶುರು ಮಾಡಿದರೆ ಟೈಮ್ ಆಯಿತು ಟೈಮ್ ಆಯಿತು ಎಂದು ಹೇಳುತ್ತೀರಿ. ತಾವು ಮಾತನಾಡುವುದು ಇದ್ದರೆ ಮಾತನಾಡಿ. ಮಾತನಾಡಲಿಕ್ಕೆ ಶುರು ಮಾಡಿದರೆ ಅವಸರ ಮಾಡುತ್ತೀರಿ. ನಮ್ಮದು ಶಾಸಕಾಂಗ ಪಕ್ಷದ ಸಭೆ ಇರುವುದರಿಂದ ನಾವು ಹೋಗಬೇಕಾಗಿದೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಬೈರೇಗೌಡರು ಏಕೆ ಭಾಷಣ ಮುಗಿಸಿದರು ಎಂದು ಈಗ ಗೊತ್ತಾಯಿತು. ಪಾರ್ಟಿ ಮೀಟಿಂಗ್ ಇರುವುದರಿಂದ ಭಾಷಣ ಮುಗಿಸಿದ್ದೀರಿ.

ಶ್ರೀ ಕೆ.ಹೆಚ್. ಹನುಮೇಗೌಡ : ಇದು ಬಹಳ ಉಪಯುಕ್ತವಾದ ಬಿಲ್. ಆಮೇಲೆ ಡಿಲೀಟ್ ಮಾಡಿಯೆಂದು ನಿಮ್ಮನ್ನು ರಿಕ್ವೆಸ್ಟ್ ಮಾಡುವ ಸಂಭವ ಬರುತ್ತದೆ. ಹೆಚ್ಚಿಗೆ ಕೆರೆ ನಾಲೆಯಿರುವ ಪ್ರದೇಶಗಳಲ್ಲಿರತಕ್ಕ ರೈತರಿಗೆ ಬಹಳ ಉಪಯೋಗವಾಗುತ್ತದೆ. ಇದುವರೆಗೆ ಎಲ್ಲರೂ ಸೇರಿಕೊಂಡು ಮಾಡಬಾರದು ಅದ್ವಾನ ಮಾಡಿ ರೈತರಿಗೆ ತೊಂದರೆ ಕೊಡುತ್ತಿದ್ದರು. ನೀರಿನ ಉಪಯೋಗವನ್ನು ಸಹಕಾರ ಸಂಘಗಳ ಮುಖಾಂತರ ವಿತರಣೆ ಮಾಡುವಂತಹ ಎಕ್ಸಪರಿಮೆಂಟ್ ಬಿಲ್ ತಂದಿದ್ದಾರೆ. ಬಹಳ ನಿರೀಕ್ಷಣೆಗಳನ್ನು ನಾವು ಮಾಡಿದ್ದೇವೆ. ಮುಕ್ತ ಸಹಕಾರಿಗಳು ಇದರಲ್ಲಿ ಬರುವುದಿಲ್ಲ. ದಯಮಡಿ ನಾಳೆಗೆ ಸಭೆಯನ್ನು ಮುಂದುವರಿಸಿ. ಎಲ್ಲರೂ ಮಾತನಾಡಲಿಕ್ಕೆ ಐದೈದು ನಿಮಿಷ ಟೈಮ್ ಕೊಡಿ. ಅವರು ಪಾರ್ಟಿ ಮೀಟಿಂಗ್‌ಗೆ ಹೋಗಬೇಕಾಗಿದೆ. ನಾಳೆಗೆ ಬೇಕಾದರೆ 8 ಗಂಟೆಯವರೆಗೆ ಕೂಡೋಣ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ನಮ್ಮ ವಿರೋಧಪಕ್ಷದ ನಾಯಕರು ಇನ್ನು ಹೆಚ್ಚು ಬೆಳಕು ಚೆಲ್ಲಬೇಕು ಎನ್ನುವುದು ಅವರ ಇಚ್ಛೆಯಾಗಿದ್ದರೆ ಚರ್ಚೆಯನ್ನು ನಾಳೆಗೆ ಮುಂದುವರಿಸುವುದಕ್ಕೆ ನನ್ನ ಅಭ್ಯಂತರವಿಲ್ಲ. ತಾವು ಸಭೆಯನ್ನು ಮುಂದೂಡಬಹುದು.

ಉಪಾಧ್ಯಕ್ಷರು : ಈಗ ಸಭೆಯನ್ನು ಮುಂದೂಡಿ ನಾಳೆ ಬೆಳಿಗ್ಗೆ 11 ಗಂಟೆಗೆ ಪುನಃ ಸಭೆಯು ಸಮಾವೇಶಗೊಳ್ಳುವುದು.

(ಸದನವು ಆರು ಗಂಟೆ ಹದಿನೈದು ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 14ನೇ ನವೆಂಬರ್ ಬೆಳಿಗ್ಗೆ ಹನ್ನೊಂದು ಗಂಟೆಗೆ ಸಭೆ ಸೇರಲು ನಿಶ್ಚಯಿಸಲಾಯಿತು.

---

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).

ಮುದ್ರಕರು: ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು,
ಶಾಮು. ತುಮಕೂರು, ಕಾಸೂ. 81 - 350 ಪುಸ್ತಕಗಳು ದಿ: 16-1-2002.